# ಕನ್ನಡದ ಕೋಟ್ಯಾಧಿಪತಿ- 2019 ('KKP 2019') ರಲ್ಲಿ ಭಾಗವಹಿಸುವಿಕೆಗೆ ಸಂಬಂಧಿಸಿದ ನಿಯಮಗಳು / ಷರತ್ತುಗಳು ಮತ್ತು ನಿಬಂಧನೆಗಳು

**I. ಸ್ಪರ್ಧೆಯ ವಿವರ:**

"KKP" ಎಂಬುದು ಪ್ರಾಥಮಿಕವಾಗಿ ಕನ್ನಡ ಭಾಷೆಯಲ್ಲಿ ನಡೆಯುವ ರಸಪ್ರಶ್ನೆ ಆಧಾರಿತ ಗೇಮ್ ಶೋ ಆಗಿದ್ದು, ಕಲರ್ಸ್ ಕನ್ನಡ (**"ಚಾನೆಲ್"**) ದಲ್ಲಿ ಆರಂಭಿಕ ಪ್ರದರ್ಶನಕ್ಕಾಗಿ ಸ್ಟುಡಿಯೋ ನೆಕ್ಸ್ಟ್ ನಿರ್ಮಾಣ (**"ನಿರ್ಮಾಪಕರು"**) ಮಾಡುತ್ತಿದ್ದು, ಈ ಸಂಸ್ಥೆಯ ಮಾಲೀಕತ್ವವನ್ನು ವೈಕಾಮ್18 ಮೀಡಿಯಾ ಪ್ರೈವೇಟ್ ಲಿಮಿಟೆಡ್ ('ವೈಕಾಮ್18' / 'ಕಂಪನಿ') ಮತ್ತು / ಅಥವಾ ಇದರ ಅಂಗಸಂಸ್ಥೆಗಳು ಹೊಂದಿವೆ.

**II. ವ್ಯಾಖ್ಯಾನಗಳು:**

1. **"ಆಡಿಷನ್‌ಗಳು":** ಆಯ್ದ ಸ್ಪರ್ಧಿ/ಗಳಿಗೆ ತಿಳಿಸಲಾದ ಕೆಲವು ದಿನಾಂಕಗಳಲ್ಲಿ ವಿವಿಧ ನಗರಗಳಲ್ಲಿ ನಡೆಯುವ ಗ್ರೌಂಡ್ ಆಡಿಷನ್‌ಗಳು.
2. **"ಆಡಿಷನ್‌ಗೆ ಒಳಗಾಗುವವ/ರು":** ಆಡಿಷನ್‌ಗಳಲ್ಲಿ ಭಾಗವಹಿಸಲು ಆಯ್ಕೆಯಾದ ನೋಂದಾಯಿತರು.
3. **"ಬ್ಯಾಕ್‌ಅಪ್ ಪಾರ್ಟಿಸಿಪೆಂಟ್/ಗಳು":** ಆಡಿಷನ್‌ಗೆ ಒಳಗಾಗಿ ಸ್ಪರ್ಧೆಯ ಫಾಸ್ಟೆಸ್ಟ್ ಫಿಂಗರ್ ಮೊದಲ ಸುತ್ತಿನಲ್ಲಿ ಭಾಗವಹಿಸಲು ಆಯ್ಕೆಯಾದವರು, ಆಯ್ಕೆಮಾಡಿದ ಯಾವುದೇ ಪಾರ್ಟಿಸಿಪೆಂಟ್/ಗಳು ಯಾವುದೇ ಕಾರಣದಿಂದಾಗಿ ಚಿತ್ರೀಕರಣಕ್ಕೆ ಸ್ಟುಡಿಯೋಗೆ ಬಾರದೇ ಇದ್ದರೆ.
4. **"ಕಂಪನಿ / ವೈಕಾಮ್18":** ವೈಕಾಮ್18 ಮೀಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು / ಅಥವಾ ಅದರ ಅಂಗಸಂಸ್ಥೆಗಳು, ಸ್ಪರ್ಧೆಯ ಸಂಘಟಕರು.
5. **"ಸ್ಪರ್ಧೆ":** ಸಾಮಾನ್ಯ ಜ್ಞಾನ ರಸಪ್ರಶ್ನೆ ಶೀರ್ಷಿಕೆ "ಕನ್ನಡದ ಕೋಟ್ಯಾಧಿಪತಿ - 2019".
6. **"ಸ್ಪರ್ಧಿ/ಗಳು"**: ನೋಂದಾಯಿಸಿದವರು, ಆಡಿಷನ್‌ಗೆ ಒಳಗಾದವರು, ಪಾರ್ಟಿಸಿಪೆಂಟ್/ಗಳು, ಬ್ಯಾಕ್‌ಅಪ್ ಪಾರ್ಟಿಸಿಪಂಟ್/ಗಳು, ಹಾಟ್ ಸೀಟ್ ಸ್ಪರ್ಧಿ/ಗಳು ಇವರೆಲ್ಲರನ್ನೂ ಒಟ್ಟಾರೆಯಾಗಿ" ಸ್ಪರ್ಧಿ/ಗಳು ಎಂದು ಕರೆಯಲಾಗುತ್ತದೆ.
7. **"ಸೆಲೆಬ್ರಿಟಿ ಸ್ಪೆಶಲ್/ಗಳು"**: ಸೆಲೆಬ್ರಿಟಿ ಹಾಟ್ ಸೀಟ್ ಸ್ಪರ್ಧಿ/ಗಳೊಂದಿಗೆ ವಿಶೇಷವಾಗಿ ರೆಕಾರ್ಡ್ ಮಾಡಲಾದ ಶೋನ ಯಾವುದೇ ಸಂಚಿಕೆ/ಗಳು.
8. **"ಕೊಡುಗೆದಾರರು"**: ಯಾವುದೇ ಆಡಿಷನ್‌ಗಳು, ಸ್ಪರ್ಧೆ, ಸ್ಟುಡಿಯೋ, ಕಾರ್ಯಕ್ರಮ, ಮತ್ತು / ಅಥವಾ ಶೋನಲ್ಲಿ ಸ್ಪರ್ಧಿಯ/ಗಳ ಹೊತರಾಗಿ ಭಾಗವಹಿಸುವ ಮತ್ತು / ಅಥವಾ ಪಾಲ್ಗೊಳ್ಳುವ ಯಾವುದೇ ವ್ಯಕ್ತಿ.
9. **"ಎಪಿಸೋಡ್"**: ಕಾರ್ಯಕ್ರಮದ ಒಂದು ಸಂಚಿಕೆ.

10. **"ಫಾಸ್ಟೆಸ್ಟ್ ಫಿಂಗರ್ ಫಸ್ಟ್ ('FFF)'**: ಎಂದರೆ ಆಯ್ಕೆಯಾದ ಪಾರ್ಟಿಸಿಪಂಟ್/ಗಳಿಗೆ ಪ್ರಶ್ನೆಯೊಂದನ್ನು ಕೇಳುವ ಕಾರ್ಯಕ್ರಮದ ಭಾಗವಾಗಿದೆ. ಪ್ರಶ್ನೆಗೆ ಸರಿಯಾಗಿ ಉತ್ತರಿಸಿದ ಮೊದಲ ವ್ಯಕ್ತಿ ಹಾಟ್ ಸೀಟ್ ಸ್ಪರ್ಧಿಯಾಗಿ ಹಾಟ್ ಸೀಟ್‌ಗೆ ಹೋಗಲು ಅರ್ಹರಾಗುತ್ತಾರೆ.

11. **"ಹಾಟ್ ಸೀಟ್ ಸ್ಪರ್ಧಿ(ಗಳು)"** : ಎಂದರೆ ಫಾಸ್ಟೆಸ್ಟ್ ಫಿಂಗರ್ ನ ಮೊದಲ ಸುತ್ತಿನ ವಿಜೇತ ಸ್ಪರ್ಧಿ ಎಂದರ್ಥ ಮತ್ತು ಸ್ಪರ್ಧೆಯಲ್ಲಿ ಮುಂದೆ ಸಾಗಲು ಹೋಸ್ಟ್ (ಕಾರ್ಯಕ್ರಮ ನಡೆಸಿಕೊಡುವವರ) ಎದುರಿಗೆ ಹಾಟ್ ಸೀಟಿನಲ್ಲಿ ಕುಳಿತುಕೊಳ್ಳಲು ಆರ್ಹರಾಗುತ್ತಾರೆ.

12. **"ಮೈಜಿಯೋ ಅಪ್"**: ಎಂದರೆ ರಿಲಯನ್ಸ್ ಜಿಯೋ ಇನ್ಫೋಕಾಮ್ ಮಾಲೀಕತ್ವದಲ್ಲಿ ಆರಂಭವಾಗಿರುವ ಅಪ್ಲಿಕೇಷನ್ ಆಗಿದ್ದು ನೋಂದಣಿದಾರರು ಸ್ಪರ್ಧೆಗಾಗಿ ನೋಂದಾಯಿಸಿಕೊಳ್ಳಬಹುದಾಗಿದೆ.

13. **"ಸ್ಪರ್ಧಿ/ಗಳು"**: ಆಡಿಷನ್ ಗೆ ಒಳಗಾಗಿ ಸ್ಪರ್ಧೆಯ ಫಾಸ್ಟೆಸ್ಟ್ ಫಿಂಗರ್ ಮೊದಲ ಸುತ್ತಿನಲ್ಲಿ ಭಾಗವಹಿಸಲು ಆಯ್ಕೆಯಾಗಿರುವ ವ್ಯಕ್ತಿ.

14. **"ಫೋನ್-ಎ-ಫ್ರೆಂಡ್/ವಿಡಿಯೋ ಕಾಲ್ ಅಭ್ಯರ್ಥಿ/ಗಳು"**: ಹಾಟ್ ಸೀಟ್ ಸ್ಪರ್ಧಿಯ ಮೂಲಕ ಫೋನ್-ಎ-ಫ್ರೆಂಡ್/ವಿಡಿಯೋ ಕಾಲ್ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ಹಾಟ್ ಸೀಟ್ ಸ್ಪರ್ಧಿಯ ಸ್ನೇಹಿತ/ತೆ. ಏಪ್ರಿಲ್ 20, 2019 ಕ್ಕೆ ಫೋನ್-ಎ-ಫ್ರೆಂಡ್/ವಿಡಿಯೋ ಕಾಲ್ ಅಭ್ಯರ್ಥಿಗೆ 18 ವರ್ಷ ತುಂಬಿರಬೇಕು ಮತ್ತು ಭಾರತದಲ್ಲಿ ವಾಸಿಸುತ್ತಿರುವ ಭಾರತೀಯ ಪ್ರಜೆಯಾಗಿರಬೇಕು.

15. **"ನಿರ್ಮಾಪಕರು"**: ಕಾರ್ಯಕ್ರಮದ ನಿರ್ಮಾಪಕರಾದ ಸೋನಿ ಪಿಕ್ಚರ್ಸ್ ನೆಟ್ವರ್ಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವಿಭಾಗವಾದ ಸ್ಟುಡಿಯೋ ನೆಕ್ಸ್ಟ್ ಎಂದರ್ಥ.

16. **"ಕಾರ್ಯಕ್ರಮ"**: ಸ್ಟುಡಿಯೊದಲ್ಲಿ ಸ್ಪರ್ಧೆಯ ರೆಕಾರ್ಡಿಂಗ್‌ಗಳು, ಆಡಿಷನ್ ಸುತ್ತಿನ ಯಾವುದಾರೂ ಫೂಟೇಜ್ ಸೇರಿದಂತೆ (ಯಾವುದೇ ಸೀಸನಲ್ ಸ್ಪೆಶಲ್ / ಸೆಲೆಬ್ರಿಟಿ ಸ್ಪೆಶಲ್, ಬ್ಯಾಕ್ ಸ್ಟೇಜ್ ರೆಕಾರ್ಡಿಂಗ್ ಮತ್ತು ಸ್ಪರ್ಧಿ/ಗಳ ಜೀವನ ಮತ್ತು ಪ್ರಯಾಣವನ್ನು ಚಿತ್ರಿಸುವ ಸ್ಪರ್ಧಿ/ಗಳ ಕುಟುಂಬ, ಸ್ನೇಹಿತರು, ಇತ್ಯಾದಿ ಒಳಗೊಂಡಿರುವ ಯಾವುದೇ ರೆಕಾರ್ಡಿಂಗ್ ತುಣುಕನ್ನು ಒಳಗೊಂಡಂತೆ).

17. **"ನೋಂದಾಯಿತರು"**: ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಯಾವುದೇ ವ್ಯಕ್ತಿ, ಅಂದರೆ (i) ಏಪ್ರಿಲ್ 20, 2019 ರಷ್ಟರಲ್ಲಿ ಹದಿನೆಂಟು (18) ವರ್ಷ ತುಂಬಿರಬೇಕು; (ii) ಭಾರತದಲ್ಲಿ ವಾಸಿಸುತ್ತಿರುವ ಭಾರತೀಯ ಪ್ರಜೆಯಾಗಿರಬೇಕು, (iii) ದೈಹಿಕ ಮತ್ತು ಮಾನಸಿಕ ಆರೋಗ್ಯ ಚೆನ್ನಾಗಿರುವ, ಮತ್ತು (iv) ಕೆಳಗೆ ಹೇಳಿರುವ ನಿಯಮಗಳು ಮತ್ತು ನಿಬಂಧನೆಗಳ ಪ್ರಕಾರ ಸ್ಪರ್ಧೆಯಲ್ಲಿ ಭಾಗವಹಿಸಬೇಕು. ಕಾಲಕಾಲಕ್ಕೆ ನೇಮಕಗೊಳ್ಳುವ ವೈಕಾಮ್18ರ ನೌಕರರು, ನಿರ್ಮಾಪಕರ ನೌಕರರು, ಜಾಹೀರಾತು ಸಂಸ್ಥೆಯ ನೌಕರರು, ಮತ್ತು ಪ್ರಾಯೋಜಕರ ನೌಕರರು ಮತ್ತು ಅವರ ಹತ್ತಿರದ ಸಂಬಂಧದ ಕುಟುಂಬದ ಸದಸ್ಯರು; ಭಾರತೀಯ ಪ್ರಜೆಗಳಲ್ಲದ ವ್ಯಕ್ತಿಗಳು, ಅಥವಾ ಭಾರತದ ಹೊರಗೆ ವಾಸಿಸುವ ಭಾರತೀಯರು ಅಥವಾ ಆದಾಯ ತೆರಿಗೆ ಕಾಯಿದೆ, 1961 ರ ಪ್ರಕಾರ ಭಾರತ ನಿವಾಸಿಗಳ ವ್ಯಾಖ್ಯಾನದಡಿಯಲ್ಲಿ ಅರ್ಹತೆ ಪಡೆಯದವರು ಅಥವಾ ಮೌಖಿಕ ಕನ್ನಡದಲ್ಲಿ ಪ್ರಾವಿಣ್ಯತೆ ಹೊಂದಿಲ್ಲದವರು ಈ ಸ್ಪರ್ಧೆಗೆ ಪ್ರವೇಶಿಸಲು ಅನರ್ಹರಾಗಿರುತ್ತಾರೆ.

18. **"ನಿಯಮಗಳು ಮತ್ತು ನಿಬಂಧನೆಗಳು"**: ಸ್ಪರ್ಧೆಗೆ ಸಂಬಂಧಿಸಿದಂತೆ ಇಲ್ಲಿ ಪೂರ್ಣವಾಗಿ ಹೇಳಿರುವ ಈ ನಿಯಮಗಳು ಮತ್ತು ನಿಬಂಧನೆಗಳು, ಇವುಗಳು ಕಾಲಕಾಲಕ್ಕೆ ತಿದ್ದುಪಡಿಗೆ ಒಳಗಾಗುತ್ತವೆ.

19. **"ಸೀಸನಲ್ ಸ್ಪೆಷಲ್/ಗಳು"**: ವರ್ಷದ ನಿರ್ದಿಷ್ಟ ಸಮಯವನ್ನು ಆಚರಿಸಲು ವಿಶೇಷವಾಗಿ ರೆಕಾರ್ಡ್ ಮಾಡಲಾದ ಶೋನ ಯಾವುದೇ ಸಂಚಿಕೆ.

20. **"ವೇಳಾಪಟ್ಟಿ"**: ಒಂದು ಸಂಚಿಕೆ ಅಥವಾ ಸಂಚಿಕೆಗಳ ಒಂದು ಸೆಟ್ ಅನ್ನು ರೆಕಾರ್ಡ್ ಮಾಡಲು ಮತ್ತು/ಅಥವಾ ರೆಕಾರ್ಡಿಂಗ್ ದಿನಾಂಕಗಳನ್ನು ಕಂಪನಿಯು ಮೊದಲೇ ನಿರ್ಣಯಿಸುತ್ತದೆ.

21. **"ಶೋ"**: ಚಾನೆಲ್‌ನಲ್ಲಿ ಪ್ರಸಾರವಾಗುವ ಕಾರ್ಯಕ್ರಮದ ಪ್ರತಿಯೊಂದು ಸಂಚಿಕೆ (ಯಾವುದೇ ಸೀಸನಲ್ ಸ್ಪೆಷಲ್/ಗಳು ಅಥವಾ ಸೆಲೆಬ್ರಿಟಿ ಸ್ಪೆಷಲ್ ಸಂಚಿಕೆ/ಗಳು ಸೇರಿದಂತೆ).

22. **"ಸ್ಟುಡಿಯೋ ಪಾರ್ಟ್"**: ಶೋನ ಭಾಗವಾಗಿರಲಿ ಅಥವಾ ಇಲ್ಲದೇ ಇರಲಿ ಆದರೂ ಸ್ಟುಡಿಯೊದಲ್ಲಿ ನಡೆಯುವ ಭಾಗ.

23. **"ಸ್ಟುಡಿಯೋ"**: ಸ್ಪರ್ಧೆ / ಸ್ಪರ್ಧೆಯ ಭಾಗ / ಸ್ಪರ್ಧೆಯ ಪ್ರೋಮೋಗಳು ನಡೆಯುವ "ಹೊಸಹಳ್ಳಿ, ವಿಜಯನಗರ ಬೆಂಗಳೂರು" ಇಲ್ಲಿರುವ ಸ್ಟುಡಿಯೋ ಅಥವಾ ಕಂಪನಿ / ನಿರ್ಮಾಪಕರು ನಿರ್ಧರಿಸಿದ ಯಾವುದೇ ಇತರ ಸ್ಟುಡಿಯೋ ಎಂದರ್ಥ.

24. **"ವಿಜೇತರು"**: ಶೋನಲ್ಲಿ ಹೋಸ್ಟ್ ಕೇಳಲಾಗುವ ಎಲ್ಲಾ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ನೀಡುವ ಹಾಟ್ ಸೀಟ್ ಸ್ಪರ್ಧಿ/ಗಳು.

**III. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ವಿಧಾನ:**

**ಹಂತ 1**

1. ಏಪ್ರಿಲ್ 20, 2019 ರಿಂದ ಆರಂಭವಾಗಿ ಏಪ್ರಿಲ್ 26, 2019ರ ವರೆಗೆ (**"ಮೊದಲ ಸುತ್ತಿನ ಅವಧಿ"**) ಶೋನ ಪ್ರಚಾರದ ಸಮಯದಲ್ಲಿ ಆಯ್ದ ಲ್ಯಾಂಡ್-ಲೈನ್ ಟೆಲಿಫೋನಿಗಾಗಿ (ಅನುಬಂಧ 1 ನೋಡಿ) ಮತ್ತು ಆಯ್ದ ವಲಯಗಳ ಮೊಬೈಲ್ ಫೋನ್ ಚಂದಾದಾರರಿಗಾಗಿ (ಅನುಬಂಧ 1 ನೋಡಿ), ಅಯ್ದ ಸರ್ಕಲ್ ಗಳಿಗೆ (ಅನುಬಂಧ 1 ನೋಡಿ), ಪಬ್ಲಿಕ್ ಕಾಲ್ ಆಫೀಸ್ (ಪಿಸಿಓ) ದಿಂದ ಮಾಡಿದ ಯಾವುದೇ ಕರೆಗಳನ್ನು ಮತ್ತು ಐಓಸ್ ಮತ್ತು ಅಂಡ್ರಾಯ್ಡ್ ಫ್ಲಾಟ್ ಫಾರ್ಮ್ ಗಳಲ್ಲಿ ಲಭ್ಯವಿರುವ ಮೈ ಜಿಯೋ ಅಪ್ಲಿಕೇಷನ್ ಬಳಸಿ ನೋಂದಾಯಿಸಿಕೊಳ್ಳುವ ಬಳಕೆದಾರರನ್ನು ಹೊರತುಪಡಿಸಿ, ಕೆಳಗೆ ಅಂಶ 04 ರಲ್ಲಿ ನೀಡಿದಂತೆ, ಅಂದರೆ ಮೊದಲ ಸುತ್ತಿನ ಅವಧಿಯಲ್ಲಿ ಒಟ್ಟು ಏಳು (7) ವಿಶಿಷ್ಟ ಪ್ರಶ್ನೆಗಳನ್ನು ಕೇಳಲಾಗುತ್ತದೆ. ವೀಕ್ಷಕರನ್ನು ಸ್ಪರ್ಧೆಗೆ ನೋಂದಾಯಿಸಲು ಆಹ್ವಾನಿಸುವ ಪ್ರಚಾರವನ್ನು ಪ್ರಸಾರ ಮಾಡಲಾಗುತ್ತದೆ. ಮೊದಲ ರೌಂಡ್ ಅವಧಿಯ ಪ್ರತಿ ಪ್ರಶ್ನೆಗೆ ದೂರವಾಣಿ ಲೈನ್ ಗಳು ಮತ್ತು ಮೊಬೈಲ್ ಫೋನ್ ಲೈನ್ ಗಳು ಮತ್ತು SMS ಸ್ವೀಕರಿಸುವಿಕೆಯು ಇಪ್ಪತ್ತಮೂರು ಗಂಟೆ ಮತ್ತು ಮೂವತ್ತು ನಿಮಿಷಗಳವರೆಗೆ (23 ಗಂಟೆ 30 ನಿಮಿಷಗಳು)

ಮಾತ್ರ ಅಂದರೆ 8:00:00 PM (IST) ನಿಂದ ಮರುದಿನದ 7:30:00 PM (IST) ರವರೆಗೆ ಮಾತ್ರ ತೆರೆದಿರುತ್ತದೆ. ವಿವರವಾದ ಸಮಯಾವಧಿಗಳು ಕೆಳಗಿನಂತಿವೆ:

**ಮೊದಲ ಸುತ್ತಿನ ಅವಧಿಯ ಪ್ರಶ್ನೆಗೆ ಟೈಮ್ ಲೈನ್ ಗಳು:**

| ಪ್ರಶ್ನೆ ಸಂಖ್ಯೆ | ಲೈನುಗಳು ಓಪನ್ ಆಗವಿಕೆ | | ಲೈನುಗಳು ಕ್ಲೋಸ್ ಆಗವಿಕೆ | |
|---|---|---|---|---|
| | ದಿನಾಂಕ | ಸಮಯ | ದಿನಾಂಕ | ಸಮಯ |
| 1 | 20 ಎಪ್ರಿಲ್ 2019 | 8:00:00 PM | 21 ಎಪ್ರಿಲ್ 2019 | 7:30:00 PM |
| 2 | 21 ಎಪ್ರಿಲ್ 2019 | 8:00:00 PM | 22 ಎಪ್ರಿಲ್ 2019 | 7:30:00 PM |
| 3 | 22 ಎಪ್ರಿಲ್ 2019 | 8:00:00 PM | 23 ಎಪ್ರಿಲ್ 2019 | 7:30:00 PM |
| 4 | 23 ಎಪ್ರಿಲ್ 2019 | 8:00:00 PM | 24 ಎಪ್ರಿಲ್ 2019 | 7:30:00 PM |
| 5 | 24 ಎಪ್ರಿಲ್ 2019 | 8:00:00 PM | 25 ಎಪ್ರಿಲ್ 2019 | 7:30:00 PM |
| 6 | 25 ಎಪ್ರಿಲ್ 2019 | 8:00:00 PM | 26 ಎಪ್ರಿಲ್ 2019 | 7:30:00 PM |
| 7 | 26 ಎಪ್ರಿಲ್ 2019 | 8:00:00 PM | 27 ಎಪ್ರಿಲ್ 2019 | 7:30:00 PM |

2. ಭಾಗವಹಿಸುವ ಸಲುವಾಗಿ ನೀವು ಮಾಡುವ ಕರೆಗಳು ಮತ್ತು / ಅಥವಾ ಐಓಸ್ ಮತ್ತು ಅಂಡ್ರಾಯ್ಡ್ ಫ್ಲಾಟ್ ಫಾರ್ಮ್ ಗಳಲ್ಲಿ ಲಭ್ಯವಿರುವ ಮೈ ಜಿಯೋ ಅಪ್ಲಿಕೇಷನ್ ಬಳಸಿ ನೋಂದಾಯಿಸಿಕೊಳ್ಳುವರು ಮತ್ತು / ಅಥವಾ SMS (ಒಟ್ಟಿಗೆ **"ಎಂಟ್ರಿ"** ಎಂದು ಉಲ್ಲೇಖಿಸಲಾಗುತ್ತದೆ) ಫೋನ್ ಲೈನ್ ಮುಚ್ಚುವ ಸಮಯಕ್ಕೆ ಅಥವಾ ಅದಕ್ಕಿಂತ ಮುಂಚೆ ಪೂರ್ಣಗೊಂಡರೆ ಮಾತ್ರ ಅದನ್ನು ಮಾನ್ಯವಾದ ಎಂಟ್ರಿ ಎಂದು ಪರಿಗಣಿಸಲಾಗುತ್ತದೆ (“**ಮಾನ್ಯವಾದ ಎಂಟ್ರಿ/ಗಳು**”).

3. ನೋಂದಣಿಯಾದವರನ್ನು ಗುರುತಿಸಲು ನೋಂಡಣಿ ಸ್ವಕರಿಸಿದ ಸೆಲ್ಯೂಲಾರ್ / ಲ್ಯಾಂಡ್ ಲೈನ್ ಸಂಖ್ಯೆಯನ್ನು ನೋಂದಣಿದಾರರನ್ನು ಗುರುತಿಸಲು ಅನನ್ಯ ಗುರುತಿನ ಸಂಖ್ಯೆಯಾಗಿ ಬಳಸಲಾಗುತ್ತದೆ. ಪ್ರತಿ ನೋಂದಾಯಿತರು ಅನೇಕ ಎಂಟ್ರಿಗಳನ್ನು ಸಲ್ಲಿಸಬಹುದು. ಪ್ರತಿ ದಿನ ಕಳುಹಿಸಲಾದ ಮಾನ್ಯ ಎಂಟ್ರಿಯನ್ನು **ಆ ದಿನದ** (ಒಂದು ದಿನವನ್ನು 8:00:00 PM ನಿಂದ 7:30:00 PM ವರೆಗೆ, 23 ಗಂಟೆ ಮತ್ತು 30 ನಿಮಿಷಗಳ ಅವಧಿದ್ದು ಎಂದು ವ್ಯಾಖ್ಯಾನಿಸಲಾಗಿದೆ) ಯಾದೃಚ್ಛಿಕ ಆಯ್ಕೆ (ರಾಂಡಮ್ ಸೆಲೆಕ್ಷನ್) ಪ್ರಕ್ರಿಯೆಗೆ ಮಾತ್ರ ಪರಿಗಣಿಸಲಾಗುತ್ತದೆ.

4. ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ನೋಂದಾಯಿಸ ಬಯಸುವವರು ಸರಿಯಾದ ಆಯ್ಕೆಯನ್ನು ಆರಿಸಿ ಸರಿಯಾದ ಉತ್ತರವನ್ನು ನೀಡಬೇಕು ಮತ್ತು ಕೆಳಗಿನ ಗ್ರಿಡ್‌ನಲ್ಲಿ ಸೂಚಿಸಲಾದ ವಿಧಾನದಂತೆ ಮತ್ತು ಶೋನ ಪ್ರಚಾರದಲ್ಲಿ ತಿಳಿಸಲಾಗುವ ವಿಧಾನದಲ್ಲಿ ಎಂಟ್ರಿಯನ್ನು ಕಳುಹಿಸಬೇಕು:

**ಅನುಬಂಧ 1** ರ ಪ್ರಕಾರ ಟೆಲಿಕಾಂ ಪೂರೈಕೆದಾರರಿಗೆ (ಮೊಬೈಲ್ ಮತ್ತು ಲ್ಯಾಂಡ್ ಲೈನ್ ಚಂದಾದಾರರಿಗೆ, PCO ದಿಂದ ಮಾಡುವ ಯಾವುದೇ ಕರೆಗಳನ್ನು ಹೊರತುಪಡಿಸಿ,) IVR ಲಭ್ಯವಿದೆ.

| ಭಾಗವಹಿಸುವ ವಿಧಾನ | ಡಯಲ್ / SMS ಮಾಡಬೇಕಾಗಿರುವ ಸಂಖ್ಯೆ | ಭಾಗವಹಿಸುವಿಕೆಯ ದರಗಳು |
|---|---|---|
| IVR | 5056882 01-04 | ರೂ. 7/- ರವರೆಗೆ, ಪ್ರತಿ ನಿಮಿಷಕ್ಕೆ** |
| SMS | 509093 | ರೂ. 3/- ರವರೆಗೆ, ಪ್ರತಿ SMS ಗೆ |
| ಮೈ ಜಿಯೋ ಆಪ್ | ಮೈ ಜಿಯೋ ಆಪ್ ನಲ್ಲಿ ವ್ಯಾಖ್ಯಾನಿಸಲಾದ ಫ್ಲೋ ಪ್ರಕಾರ | ನಿಗದಿತ ಡೇಟಾ ಶುಲ್ಕಗಳು |

** ಅನ್ವಯವಾಗುವ ಕಾನೂನುಗಳು ಮತ್ತು ನಿಬಂಧನೆಗಳ ಕಾರಣದಿಂದ ದರಗಳು ಬದಲಾಗುತ್ತವೆ. ದಯವಿಟ್ಟು ನಿಮ್ಮ ಟೆಲಿಕಾಂ ಆಪರೇಟರ್‌ಗಳ ಬಳಿ ದರಗಳನ್ನು ಪರಿಶೀಲಿಸಿ. ಅನ್ವಯವಾಗುವ ಯಾವುದೇ ಇತರ ಶುಲ್ಕಗಳ ಬಗ್ಗೆ ದಯವಿಟ್ಟು ನಿಮ್ಮ ಟೆಲಿಕಾಂ ಆಪರೇಟರನ್ನು ಪರಿಶೀಲಿಸಿ. ರೋಮಿಂಗ್ ದರಗಳು ಅನ್ವಯಿಸಬಹುದು.

**ಅನುಬಂಧ 1** ರಲ್ಲಿ ವಿವರಿಸಿರುವಂತೆ ಸಂಕ್ಷಿಪ್ತ ಕೋಡ್ 509093 ಆಯ್ದ ಟೆಲಿಕಾಂ ಆಪರೇಟರ್ ಮತ್ತು ವಲಯಗಳಲ್ಲಿ ಲಭ್ಯವಿದೆ.

SMS ಮೂಲಕ ಉತ್ತರಿಸುವುದು ಹೇಗೆ?

**ಮೊದಲ ಸುತ್ತಿನ ಅವಧಿ**

ಎ. KKP<ಸ್ಪೇಸ್>A/B/C/D<ಸ್ಪೇಸ್><ವಯಸ್ಸು(ಎಪ್ರಿಲ್ 20, 2019ಕ್ಕೆ ಪೂರ್ಣಗೊಂಡ ವಯಸ್ಸು)><ಸ್ಪೇಸ್><ಲಿಂಗ(M/F)>ಸ್ಪೇಸ್><B/K>(ನಿಮ್ಮ ಪ್ರಸ್ತುತ ಸ್ಥಳ ಬೆಂಗಳೂರು ಆಗಿದ್ದಲ್ಲಿ ಮತ್ತು B ಮತ್ತು ನಿಮ್ಮ ಪ್ರಸ್ತುತ ಸ್ಥಳ ಬೆಂಗಳೂರನ್ನು ಹೊರತುಪಡಿಸಿದ ಸ್ಥಳವಾಗಿದ್ದರೆ K)

ಉದಾಹರಣೆಗೆ, KKP A 24 M B

ಬಿ. ಈ ಡೇಟಾ ಹೀಗೆ ಸಂಗ್ರಹಿಸಲಾಗುವುದು (1) SMS ಕಳುಹಿಸಿದ ಸಂಖ್ಯೆ (2) ಮೆಸೇಜ್ (3) ಸ್ವೀಕರಿಸಿದ ದಿನಾಂಕ (4) ಸ್ವೀಕರಿಸಿದ ಸಮಯ

ಸಿ. SMS ಫಾರ್ಮಾಟಿನಲ್ಲಿ ದೋಷವಿದ್ದಲ್ಲಿ, "ಅಮಾನ್ಯವಾದ ಎಂಟ್ರಿ, ಸರಿಯಾದ ಫಾರ್ಮಾಟ್ KKP(ಸ್ಪೇಸ್)(ಉತ್ತರ(A/B/C/D)(ಸ್ಪೇಸ್)(ವಯಸ್ಸು(ಪೂರ್ಣಗೊಂಡ ವಯಸ್ಸು))(ಸ್ಪೇಸ್)(ಲಿಂಗ(M/F)(ಸ್ಪೇಸ್)(ಪ್ರಸ್ತುತ ನಗರ/ಸ್ಥಳ(B/K)(ಬೆಂಗಳೂರು/ಬೆಂಗಳೂರಿನ ಹೊರಗೆ)). ಷರತ್ತು ಮತ್ತು ನಿಬಂಧನೆಗಳಿಗೆ http://www.colorskannada.com, ಪ್ರತಿ SMSಗೆ ರೂ.3 ರವರೆಗೆ" ಎಂಬ ಪ್ರತ್ಯುತ್ತರದ ಮೆಸೇಜ್ ಬರುತ್ತದೆ.

ಡಿ. ನಿಗದಿತ ನಮೂನೆಯಲ್ಲಿ ಕಳುಹಿಸಲಾದ ಎಂಟ್ರಿಗಳಿಗೆ ಸ್ವೀಕೃತಿ ಸಂದೇಶವು ಹೀಗಿರುತ್ತದೆ "KKP ಗೆ ನೋಂದಾಯಿದ್ದಕ್ಕೆ ಧನ್ಯವಾದಗಳು". ನೀವು ಮುಂದಿನ ಸುತ್ತಿಗೆ ಆಯ್ಕೆಯಾದರೆ ನಾವು ಈ ಸಂಖ್ಯೆಗೆ ಮರಳಿ ಕರೆ ಮಾಡುತ್ತೇವೆ. ಷರತ್ತು ಮತ್ತು ನಿಬಂಧನೆಗಳಿಗೆ http://www.colorskannada.com, ಪ್ರತಿ SMSಗೆ ರೂ.3 ರವರೆಗೆ"

IVR ಮೂಲಕ ಉತ್ತರಿಸುವುದು ಹೇಗೆ?

ಎ. ಮೊದಲನೇ ಸುತ್ತಿನ ಅವಧಿ: 5056882 ಕ್ಕೆ ಕರೆ ಮಾಡಿ, 01/02/03/04 ಒತ್ತಿರಿ (ಅಂದರೆ 5056882 ಕ್ಕೆ ಕರೆ ಮಾಡಿ ಆಯ್ಕೆ Aಗೆ 01 ಅನ್ನು, ಆಯ್ಕೆ Bಗೆ 02 ಅನ್ನು, ಆಯ್ಕೆ Cಗೆ 03 ಅನ್ನು ಮತ್ತು ಆಯ್ಕೆ D ಗೆ 04 ಅನ್ನು ಒತ್ತಿರಿ). IVR ಕನ್ನಡದಲ್ಲಿ ಮಾತ್ರ ಇರುತ್ತದೆ.

ಬಿ. ನೋಂದಾಯಿಸಲು ಬಯಸುವವರಿಗೆ ತಮ್ಮ ವಯಸ್ಸನ್ನು ಪೂರ್ಣಗೊಂಡ ವರ್ಷಗಳಲ್ಲಿ ನಮೂದಿಸಲು ಕೇಳಲಾಗುತ್ತದೆ (ಉದಾಹರಣೆಗೆ: ಒಬ್ಬ ವ್ಯಕ್ತಿಗೆ 25 ವರ್ಷ ಮತ್ತು 11 ತಿಂಗಳಾಗಿದ್ದರೆ, ಅವರು 25 ಎಂದು ನಮೂದಿಸಬೇಕು) ಮತ್ತು ಅದನ್ನು ದೃಢೀಕರಿಸಬೇಕು.

ಸಿ. IVR ಮೆನುವಿನ ಮೂಲಕ ನೋಂದಣಿ ಮಾಡಿಸಿಕೊಳ್ಳಲಾಗುವುದು, ಅಲ್ಲಿ ಲಿಂಗವನ್ನು (ಪುರುಷನಾಗಿದ್ದಲ್ಲಿ 1 ಮತ್ತು ಮಹಿಳೆಯಾಗಿದ್ದಲ್ಲಿ 2) ನಮೂದಿಸಲು ಕೇಳಲಾಗುವುದು ಮತ್ತು ಅದನ್ನು ದೃಢೀಕರಿಸಬೇಕು.

ಡಿ. ನೋಂದಣಿಯನ್ನು ಐವಿಆರ್ ಮೆನುವಿನ ಮೂಲಕ ಮಾಡಿಕೊಳ್ಳಲಿದ್ದು ಅಲ್ಲಿ ಅವರು ಪ್ರಸ್ತುತ ನಗರ / ಸ್ಥಳವನ್ನು (ಬೆಂಗಳೂರಿಗೆ 1 ಮತ್ತು ಬೆಂಗಳೂರಿನ ಹೊರಗಿನ ಸ್ಥಳಕ್ಕೆ 2) ನಮೂದಿಸುವಂತೆ ಕೇಳಲಾಗುತ್ತದೆ ಮತ್ತು ಅದನ್ನೇ ಖಚಿತಪಡಿಸಿಕೊಳ್ಳಬೇಕಾಗುತ್ತದೆ.

ಇ. ಮತ್ತು ಕರೆಯು ಧನ್ಯವಾದ ಸೂಚನೆ / ಪ್ಲೇ ಬ್ಯಾಕ್ ಆಯ್ಕೆಯೊಂದಿಗೆ ಕೊನೆಗೊಳ್ಳುತ್ತದೆ.

IVR ಸಮಯದಲ್ಲಿ, IVR ವಿನಂತಿಸಿಕೊಂಡ ಆರು (6) ಸೆಕೆಂಡುಗಳ ಒಳಗೆ ನೋಂದಾಯಿಸಲು ಬಯಸುವವರುವ ಯಾವುದೇ ಮಾಹಿತಿಯನ್ನು ನೀಡದಿದ್ದರೆ, ಸೂಚನೆಯು ಮತ್ತೊಮ್ಮೆ ಪುನರಾವರ್ತನೆಯಾಗುತ್ತದೆ, ಅದರ ನಂತರವೂ ಮುಂದಿನ ಆರು (6) ಸೆಕೆಂಡುಗಳಲ್ಲಿ ಉತ್ತರ

ದೊರೆಯದಿದ್ದರೆ ಮೊಬೈಲಿನಲ್ಲಿ ಮುಕ್ತಾಯದ ಸಂದೇಶ ಬರುತ್ತದೆ ಮತ್ತು ಕರೆ ಅಂತ್ಯಗೊಳ್ಳುತ್ತದೆ. ಉತ್ತರವವನ್ನು ಸರಿಯಾದ ಫಾರ್ಮಾಟಿನಲ್ಲಿ ಬರೆಯದಿದ್ದರೆ, ಅಥವಾ ಸ್ವೀಕಾರಾರ್ಹ ಉತ್ತರ ಆಯ್ಕೆಗಳಲ್ಲದೇ ಇದ್ದರೆ, ಪ್ರಶ್ನೆಯನ್ನು ಮತ್ತೊಮ್ಮೆ ಪುನರಾವರ್ತಿಸಲಾಗುವುದು; ಎರಡನೇ ಬಾರಿಗೂ ಅಮಾನ್ಯ ಪ್ರತಿಕ್ರಿಯೆಯನ್ನು ಪಡೆದರೆ, ಕರೆ ಮುಕ್ತಾಯದ ಸಂದೇಶ ಬರುತ್ತದೆ ಮತ್ತು ಕರೆ ಅಂತ್ಯಗೊಳ್ಳುತ್ತದೆ. ಫಾರ್ಮಾಟ್ ಪ್ರಕಾರ ಉತ್ತರಿಸಿದಲ್ಲಿ, ನೋಂದಾಯಿಸ ಬಯಸುವವರ ಎಂಟ್ರಿಯನ್ನು ದೃಢಪಡಿಸಲು ಅಥವಾ ಅವನ/ಅವಳ ಪ್ರತಿಕ್ರಿಯೆಯನ್ನು ಮರು ನಮೂದಿಸಲು ಕೇಳಲಾಗುತ್ತದೆ. ನೋಂದಾಯಿಸ ಬಯಸುವವರು ತಾವು ನಮೂದಿಸಿದ ಉತ್ತರವನ್ನು ದೃಢಪಡಿಸದಿದ್ದರೆ, ಮುಕ್ತಾಯದ ಸಂದೇಶ ಬರುತ್ತದೆ ಮತ್ತು ಕರೆ ಅಂತ್ಯಗೊಳ್ಳುತ್ತದೆ.

ಟೆಲಿಕಾಂ ಆಪರೇಟರ್ ಗಳಿಗೆ (ಮೊಬೈಲ್ ಮತ್ತು ಲ್ಯಾಂಡ್ ಲೈನ್) ಮೊದಲ ಸುತ್ತಿನ ಅವಧಿಯ IVR ಆಯ್ಕೆಯು **ಅನುಬಂಧ 1** ರ ಪ್ರಕಾರ ಲಭ್ಯವಿದೆ.

ನೋಂದಣಿ ಸಂಖ್ಯೆಗಳಿಗೆ ಮಾಡಿದ ಎಲ್ಲಾ ಕರೆಗಳಿಗೂ ನಿಮಿಷಕ್ಕೆ ರೂ. 7/- ವಿಧಿಸಲಾಗುತ್ತದೆ.

ರೋಮಿಂಗ್ ದರಗಳು ಸಹ ಅನ್ವಯವಾಗಬಹುದು ಮತ್ತು ನೋಂದಾಯಿಸ ಬಯಸುವವರು ಅನ್ವಯವಾಗುವ ದರಗಳ ಬಗ್ಗೆ ತಿಳಿಯಲು ಟೆಲಿಕಾಂ ಸೇವಾ ಪೂರೈಕೆದಾರರನ್ನು ಸಂಪರ್ಕಿಸಬೇಕು.

ಐಓಎಸ್ ಮತ್ತು ಆಂಡ್ರಾಯ್ಡ್ ಪ್ಲಾಟ್ ಫಾರ್ಮ್ ಗಳಲ್ಲಿ ಲಭ್ಯವಿರುವ ಮೈಜಿಯೋ ಅಪ್ಲಿಕೇಶನ್ ಬಳಸಿ ಭಾಗವಹಿಸುವುದು ಹೇಗೆ (ಡೇಟಾ-ಸಕ್ರಿಯಗೊಳಿಸಿದ ಹ್ಯಾಂಡ್ ಸೆಟ್ ಗಳಲ್ಲಿ ಲಭ್ಯವಿದೆ, ಲಭ್ಯವಿರುವ ಡೇಟಾ ನೆಟ್ವರ್ಕ್ ಗಳಿಗೆ ಒಳಪಟ್ಟಿರುತ್ತದೆ, ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ನಿಮ್ಮ ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ)

1. ಅಪ್ಲಿಕೇಶನ್ ಸ್ಟೋರ್ ನಿಂದ ಮೈಜಿಯೋ ಅಪ್ಲಿಕೇಶನ್ ಅನ್ನು ಡೌನ್ಲೋಡ್ ಮಾಡಿ. ದಯವಿಟ್ಟು ಗಮನಿಸಿ, ಅಪ್ಲಿಕೇಶನ್ ಡೌನ್ಲೋಡ್ ಉಚಿತವಾಗಿರುತ್ತದೆ, ಆದಾಗ್ಯೂ ಡೇಟಾ ಶುಲ್ಕಗಳು ಅನ್ವಯಿಸಬಹುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಿಮ್ಮ ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ.
2. ದಯವಿಟ್ಟು ನಿಮ್ಮ ಉತ್ತರ ಆಯ್ಕೆಯನ್ನು (A/B/C/ D) ಆಯ್ಕೆ ಮಾಡಿ.
3. ದಯವಿಟ್ಟು ನಿಮ್ಮ ಇಮೇಲ್ ಐಡಿ ಮತ್ತು ಮೊಬೈಲ್ ಸಂಖ್ಯೆಯನ್ನು ನಮೂದಿಸಿ. ನೀವು ಇನ್ಪುಟ್ ಹೊಂದಿರುವ ಮೊಬೈಲ್ ಸಂಖ್ಯೆಯು ಭಾರತದಲ್ಲಿನ ಸೇವಾ ಪೂರೈಕೆದಾರರೊಂದಿಗೆ ನೋಂದಾಯಿಸಲ್ಪಟ್ಟಿದ್ದರೆ ಮಾತ್ರ ನಾವು ನಿಮ್ಮೊಂದಿಗೆ ಸಂಪರ್ಕದಲ್ಲಿರಲು ಸಾಧ್ಯವಾಗುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.

4. ನಿಮ್ಮ ಪೂರ್ಣ ಹೆಸರನ್ನು ನಮೂದಿಸಿ.

5. ದಯವಿಟ್ಟು ನಿಮ್ಮ ವಯಸ್ಸನ್ನು ನಮೂದಿಸಿ. ಏಪ್ರಿಲ್ 20, 2019 ಕ್ಕೆ 18 ವರ್ಷ ವಯಸ್ಸಿನ್ನು ಪೂರ್ಣಗೊಳಿಸಿರುವವರನ್ನು ಮಾತ್ರ ಸ್ಪರ್ಧೆಯ ನೋಂದಣಿಗೆ ಪರಿಗಣಿಸಲಾಗುವುದು ಎಂಬುದನ್ನು ದಯವಿಟ್ಟು ಗಮನಿಸಿ.

6. ದಯವಿಟ್ಟು ಪುರುಷ ಮತ್ತು ಸ್ತ್ರೀ ಎಂಬ ಆಯ್ಕೆಗಳಲ್ಲಿ ನಿಮ್ಮ ಲಿಂಗವನ್ನು ಆಯ್ಕೆ ಮಾಡಿ

7. ನಿಮ್ಮ ನಿವಾಸದ ಸ್ಥಳವನ್ನು ಬೆಂಗಳೂರು ಮತ್ತು ಕರ್ನಾಟಕದ ಉಳಿದ ಪ್ರದೇಶಗಳು ಎಂದು ದಯವಿಟ್ಟು ಆಯ್ಕೆಮಾಡಿ

**ಹಂತ 2**

ಸ್ವೀಕರಿಸಿದ ಎಲ್ಲಾ ಎಂಟ್ರಿಗಳಿಂದ ರಾಂಡಮ್ ಆಗಿ ಆಯ್ಕೆ ಮಾಡುವ ಸಾಫ್ಟ್‌ವೇರ್‌ನಿಂದ ಸುಮಾರು 12,000 (ಹನ್ನೆರಡು ಸಾವಿರ) ಮಾನ್ಯವಾದ ಸರಿಯಾದ ಎಂಟ್ರಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಒಂದೇ ಮೊಬೈಲ್ ಟೆಲಿಫೋನ್ ಸಂಖ್ಯೆಯಿಂದ ಬಂದ ಒಂದಕ್ಕಿಂತ ಹೆಚ್ಚಿನ ಎಂಟ್ರಿಗಳನ್ನು ರಾಂಡಮ್ ತಂತ್ರಾಂಶವು ಆಯ್ಕೆಗೆ ಪರಿಗಣಿಸುತ್ತದೆ, ಮೊದಲ ಸುತ್ತಿನ ಅವಧಿಯಲ್ಲಿ ಒಂದು ಮೊಬೈಲ್ ದೂರವಾಣಿ ಸಂಖ್ಯೆಯನ್ನು ಆಯ್ಕೆ ಮಾಡಿದ ನಂತರ, ಅದನ್ನು ಎರಡನೇ ಬಾರಿಗೆ ಆಯ್ಕೆ ಮಾಡಲಾಗುವುದಿಲ್ಲ.

ಪ್ರತಿ ದಿನ (ಅವಧಿಯನ್ನು 8:00:00 PM ನಿಂದ ಮುಂದಿನ ದಿನದ 7:30:00 PM ವರೆಗೆ ಎಂದು ವ್ಯಾಖ್ಯಾನಿಸಲಾಗಿದೆ) ಸ್ವೀಕರಿಸಿದ ಮಾನ್ಯ ಎಂಟ್ರಿಗಳಿಂದ ಪ್ರತಿ ದಿನವೂ ಯಾದೃಚ್ಛಿಕವಾಗಿ ಮಾನ್ಯ ಎಂಟ್ರಿಗಳನ್ನು ಆಯ್ಕೆಮಾಡಲಾಗುತ್ತದೆ.

ಮೊದಲ ಸುತ್ತಿನ ಅವಧಿಗಾಗಿ ಮಾನ್ಯ ಎಂಟ್ರಿಗಳ ಪಟ್ಟಿಯನ್ನು ರಾಂಡಮೈಸರ್ ಪೂರ್ವ ನಿರ್ಧಾರಿತ ಮೀಸಲಾತಿ ಮಾನದಂಡಗಳ ಆಧಾರದ ಮೇಲೆ ಸಮಂಜಸವಾದ ಪ್ರಯತ್ನ ಮೂಲಕ ಆಯ್ಕೆ ಮಾಡುತ್ತದೆ.

| ಹಂತ ಒಂದು | | | | | | | | |
|---|---|---|---|---|---|---|---|---|
| ಹಂತ 1 ರ ಪ್ರಕ್ರಿಯೆಗೆ ಗ್ರಿಡ್ (ಶೇಕಡಾದಲ್ಲಿ) | | | ಪುರುಷರು | | | ಮಹಿಳೆಯರು | | |
| | | | 33.0% | | | 67.0% | | |
| | | | 18-25 | 26-35 | 36+ | 18-25 | 26-35 | 36+ |
| | | | 35% | 35% | 30% | 35% | 40% | 25% |
| ವಲಯ 1 | ಬೆಂಗಳೂರು | 30% | 3.5% | 3.5% | 3.0% | 7.0% | 8.0% | 5.0% |
| ವಲಯ 2 | ಕರ್ನಾಟಕದ ಉಳಿದ ಭಾಗ | 70% | 8.1% | 8.1% | 6.9% | 16.4% | 18.8% | 11.7% |
| ಒಟ್ಟು | | | 100% | | | | | |

ಅಸಮರ್ಪಕ ಮಾನ್ಯ ಎಂಟ್ರಿಗಳಿಂದಾಗಿ ಗ್ರಿಡ್‌ನ ಒಂದು ಅಥವಾ ಹೆಚ್ಚಿನ ಸೆಲ್‌ಗಳನ್ನು ಪೂರ್ಣಗೊಳಿಸಲು ರಾಂಡಮೈಸರ್ ಸಾಫ್ಟ್‌ವೇರ್‌ಗೆ ಸಾಧ್ಯವಾಗದೇ ಇದ್ದಲ್ಲಿ, ಕಂಪನಿಯು ತನ್ನ ವಿವೇಚನೆಯಿಂದ ಈ ಕೊರತೆಯನ್ನು ತುಂಬಬಹುದು. ಯಾವುದೇ ದಿನದಲ್ಲಿ ಗ್ರಿಡ್‌ನ ಕೊರತೆಗಳನ್ನು ಅದೇ ದಿನದ ಅಥವಾ ನಂತರದ ದಿನಗಳ ಇತರೆ ಸರಿಯಾದ ನೋಂದಣಿಗಳಿಂದ ತಪ್ಪಾದ ನೋಂದಣಿಗಳನ್ನು ಸರಿದೂಗಿಸಬಹುದು. ಇದು ಮೊದಲ ಸುತ್ತಿನ ಅವಧಿಗೆ ಅನ್ವಯಿಸುತ್ತದೆ.

ಏಪ್ರಿಲ್ 22, 2019 ರಿಂದ ಆರಂಭವಾಗಿ ಏಪ್ರಿಲ್ 28, 2019 ರ ವರೆಗಿನ ಅವಧಿಯಲ್ಲಿ ಕಂಪನಿಯ ಬಳಿ ದೊರೆಯುವ ವಿವರಗಳ ಪ್ರಕಾರ ನೋಂದಣಿಗಾಗಿ ಬಳಸಲಾದ ದೂರವಾಣಿ ಸಂಖ್ಯೆಗೆ ಮೊದಲ ಸುತ್ತಿನ ಅವಧಿಯಲ್ಲಿ ಸ್ವೀಕರಿಸಿದ ನೋಂದಾಯಿತರ ಸುಮಾರು 12,000 ಸರಿಯಾದ ಎಂಟ್ರಿಗಳಿಗೆ ದೂರವಾಣಿ ಕರೆ ಮಾಡಲಾಗುವುದು.

ವಾಸ್ತವ ಪರಿಸ್ಥಿತಿಗಳು, ಪಾಲ್ಗೊಳ್ಳುವಿಕೆಯ ಮಟ್ಟ, ತಾಂತ್ರಿಕ ಸಮಸ್ಯೆಗಳು, ಅನಿವಾರ್ಯ ಕಾರಣ, ಇತ್ಯಾದಿಗಳನ್ನು ಆಧರಿಸಿ ಈ ಟೈಮ್‌ಲೈನ್‌ಗಳು ಬದಲಾಗುತ್ತವೆ.

ಈ ಕೆಳಗಿನ ಕಾರಣಗಳನ್ನು ಒಳಗೊಂಡಂತೆ, ಆದರೆ ಇಷ್ಟಕ್ಕೆ ಸೀಮಿತವಲ್ಲದೆ, ಮರಳಿ ಕರೆಮಾಡುವಿಕೆ ಯಶಸ್ವಿಯಾಗದಿದ್ದರೆ ಚಾನಲ್ ಮತ್ತು ಕಂಪನಿ ಜವಾಬ್ದಾರರಾಗಿರುವುದಿಲ್ಲ:

ಎ) ಲೈನ್ ಕಾರ್ಯನಿರತವಾಗಿದ್ದಲ್ಲಿ
ಬಿ) ನೆಟ್‌ವರ್ಕ್‌ನಲ್ಲಿ ದಟ್ಟಣೆ
ಸಿ) ಉತ್ತರವನ್ನು ಸ್ವೀಕರಿಸದಿದ್ದಲ್ಲಿ
ಡಿ) ಕಳಪೆ ಕರೆಯ ಪರಿಸ್ಥಿತಿಗಳು / ಅಸ್ಪಷ್ಟ ಸ್ವೀಕೃತಿ
ಇ) ಸಂಖ್ಯೆ ಎಂಗೇಜ್ ಆಗಿದ್ದಲ್ಲಿ
ಎಫ್) ಕಾಲ್ ಡ್ರಾಪ್ ಆದಲ್ಲಿ
ಜಿ) ಕರೆಯು ವಿಫಲವಾದರೆ ಅಥವಾ ಕರೆಯನ್ನು ಕಡಿತಗೊಳಿಸಬಹುದಾದ ಇತರ ಕಾರಣಗಳು.

ನೋಂದಾಯಿಸಿಕೊಂಡವರು ಕರೆ ಮಾಡುವುದರಲ್ಲಾದ ಯಾವುದೇ ವಿಳಂಬ ಅಥವಾ ಮರಳಿ ಮಾಡಿದ ಕರೆಯನ್ನು ಸ್ವೀಕರಿಸದೆ ಇರುವ ಕಾರಣದಿಂದಾಗಿ ಈ ಆಯ್ಕೆ ಸುತ್ತಿನಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ ಕಂಪನಿಯು ಹೊಣೆಯಲ್ಲ.

ಆಯ್ಕೆಯಾದ ನೋಂದಾಯಿತರು ಕಾಲ್ ಸೆಂಟರ್ ಎಕ್ಸಿಕ್ಯೂಟಿವ್‌ಗಳಿಂದ ("CCE") ಕರೆಗಳನ್ನು ಸ್ವೀಕರಿಸುತ್ತಾರೆ ಮತ್ತು ಆಯ್ಕೆಯಾದ ನೋಂದಾಯಿತರು ಕಾಲ್ ಸೆಂಟರ್ ಎಕ್ಸಿಕ್ಯೂಟಿವ್‌ಗಳು ("CCE") ಕೇಳುವ ವಿವರಗಳನ್ನು ತಕ್ಷಣ ದೃಢಪಡಿಸಬೇಕು. ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಎಂಟ್ರಿಯನ್ನು ಅವನು/ಅವಳು ಕಳುಹಿಸಿದ್ದಾರೆಯೇ ಎಂದು CCEಯು ನೋಂದಣಿದಾರರನ್ನು ಕೇಳುತ್ತಾರೆ. ಅಗತ್ಯವಿರುವ ವಿವರಗಳನ್ನು ತಕ್ಷಣವೇ ಒದಗಿಸದಿದ್ದರೆ ಅಥವಾ ನೋಂದಾಯಿಸಿದವರ ದೃಢೀಕರಣವನ್ನು ಅವರು ಪಡೆಯಲು ಸಾಧ್ಯವಾಗದಿದ್ದರೆ, ಮೊದಲು ಮಾಡಿದ ದೂರವಾಣಿ ಕರೆಯ ಸುಮಾರು 30 ನಿಮಿಷಗಳ ನಂತರ ಅದೇ ವಿವರಗಳನ್ನು CCE ಕೇಳಲು ಮತ್ತೊಮ್ಮೆ ಕರೆ ಮಾಡುತ್ತಾರೆ, ಆ ವಿವರಗಳನ್ನು ಒದಗಿಸಲು ವಿಫಲವಾದರೆ ಆಯ್ಕೆಯ ಪ್ರಕ್ರಿಯೆಯಿಂದ ಇಂತಹ ನೋಂದಾಯಿತರು ಅನರ್ಹರಾಗುತ್ತಾರೆ.

ನೋಂದಾಯಿತ ದೂರವಾಣಿ ಸಂಖ್ಯೆಗೆ ಕರೆ ಮಾಡಿದಾಗ ಉತ್ತರಿಸುವ ಮತ್ತು ನಾನು ನೋಂದಣಿದಾರ ಎಂದು ಕ್ಲೈಮ್ ಮಾಡುವ ಮೊದಲ ವ್ಯಕ್ತಿಯನ್ನು, ನಾನು ಆ ವ್ಯಕ್ತಿ ಅಲ್ಲ ಎಂದು ಹೇಳದ ಹೊರತು, ಸ್ಪರ್ಧೆಯ ನಿಯಮಗಳ ಪ್ರಕಾರ ನೋಂದಣಿದಾರರು ಎಂದು ಪರಿಗಣಿಸಲಾಗುತ್ತದೆ. ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳು ಒಂದೇ ಸಂಖ್ಯೆಯ ಮೂಲಕ ಭಾಗವಹಿಸಿದ್ದರೆ ಸರಿಯಾದ ನೋಂದಾಯಿತರನ್ನು ನಿರ್ಧರಿಸುವ ಜವಾಬ್ದಾರಿಯನ್ನು ಕಂಪನಿಯು ತೆಗೆದುಕೊಳ್ಳುವುದಿಲ್ಲ.

ಕಂಪನಿ ಮತ್ತು / ಅಥವಾ ಅದರ ಅಧಿಕೃತ ಏಜೆಂಟ್, ಅಂಗಸಂಸ್ಥೆಗಳು ಮತ್ತು ಪ್ರತಿನಿಧಿಗಳು ಆಯ್ಕೆಯಾದ ನೋಂದಾಯಿತರನ್ನು ಸಂಪರ್ಕಿಸಲು ಸೂಕ್ತ ಪ್ರಯತ್ನಗಳನ್ನು ಮಾಡುತ್ತಾರೆ, ಆದರೆ ಮೊದಲು ಮಾಡಿದ ಸಂಪರ್ಕದ ನಂತರ ಮುಂದಿನ ಮೂವತ್ತು ನಿಮಿಷಗಳಲ್ಲಿ ನೋಂದಾಯಿತರನ್ನು ದೂರವಾಣಿಯ ಮೂಲಕ ಪುನಃ ತಲುಪಲು ಸಾಧ್ಯವಾಗದಿದ್ದರೆ ಮೇಲೆ ತಿಳಿಸಿದವರು ಜವಾಬ್ದಾರರಾಗಿರುವುದಿಲ್ಲ.

ಆಯ್ಕೆಯಾದ ನೋಂದಾಯಿತರೊಂದಿಗೆ CCE ಒಮ್ಮೆ ಸಂಪರ್ಕ ಮಾಡಿದ ನಂತರ ಕೆಳಗಿನ ಪ್ರಕ್ರಿಯೆಯನ್ನು ಅನುಸರಿಸಲಾಗುತ್ತದೆ:

ಕರೆ ಸ್ವೀಕರಿಸಿದವರು CCE ಗೆ ತಕ್ಷಣವೇ ತಾನು ನೋಂದಾಯಿತ/ಳು ಎಂದು ದೃಢೀಕರಿಸಿದರೆ, ನೋಂದಾಯಿತರಿಗೆ ಅವನ / ಅವಳ ಹೆಸರನ್ನು ತಿಳಿಸುವಂತೆ CCE ಕೇಳುತ್ತಾರೆ.

ನಂತರ CCE, ಆಡಿಷನ್ ದಿನಾಂಕಗಳು ಮತ್ತು ಶೂಟ್ ದಿನಾಂಕಗಳಲ್ಲಿ ನೋಂದಾಯಿತರ ಲಭ್ಯತೆಯನ್ನು ದೃಢೀಕರಿಸುವಂತೆ ಪರಿಶೀಲಿಸುತ್ತಾರೆ ಮತ್ತು ಕೇಳುತ್ತಾರೆ. ತಿಳಿಸಲಾದ ದಿನಾಂಕಗಳಂದು ನೋಂದಾಯಿತರು ಲಭ್ಯವಿದ್ದಲ್ಲಿ, ನೋಂದಣಿ ಮುಂದುವರಿಸಲು ಅಗತ್ಯವಿರುವ ವಿಳಾಸ ಮತ್ತು ಇತರ ವಿವರಗಳನ್ನು CCE ಪಡೆಯುತ್ತಾರೆ. ನೋಂದಾಯಿತರು ಆ ದಿನಾಂಕಗಳಲ್ಲಿ ಲಭ್ಯವಿಲ್ಲದೇ ಇದ್ದಲ್ಲಿ, ಅವರ ನೋಂದಣಿ

ಪ್ರಕ್ರಿಯೆಯನ್ನು ಮುಂದುವರೆಸಲು ಅನುಮತಿ ನೀಡಲಾಗುವುದಿಲ್ಲ ಮತ್ತು ಅವರನ್ನು ಮುಂದಿನ ಭಾಗವಹಿಸುವಿಕೆಯಿಂದ ಅನರ್ಹರು ಎಂದು ಪರಿಗಣಿಸಲಾಗುತ್ತದೆ.

ನಂತರ ಸ್ವಯಂಚಾಲಿತ IVR* ಮೋಡಿಗೆ ವರ್ಗಾವಣೆಯಾಗಿರು ಬಗ್ಗೆ CCE ನೋಂದಾಯಿತರಿಗೆ ತಿಳಿಸುತ್ತಾರೆ. ನಂತರ IVR ನೋಂದಾಯಿತರಿಗೆ (i) ಅವನ/ಅವಳ ವಯಸ್ಸಿನ್ನು (ಪೂರ್ಣಗೊಂಡ ವರ್ಷಗಳಲ್ಲಿ); ಮತ್ತು (ii) ಅವನ/ಅವಳ ಲಿಂಗವನ್ನು ನಮೂದಿಸಲು ಕೇಳುತ್ತದೆ. ನಂತರ IVR ನೋಂದಾಯಿತರಿಗೆ ಒಂದರ ನಂತರ ಒಂದರಂತೆ ಎರಡು 'ಕೌಶಲ ಆಧಾರಿತ' ಪ್ರಶ್ನೆಗಳಿಗೆ ಉತ್ತರ ನೀಡುವಂತೆ ಕೇಳುತ್ತದೆ ಮತ್ತು 'ಉತ್ತರಕ್ಕೆ ಹತ್ತಿರವಾದ' ಪ್ರಶ್ನೆಗೆ** ಒಂದು ಉತ್ತರವನ್ನು ನೀಡಲು ಕೇಳುತ್ತದೆ (ಅಂದರೆ, ನೋಂದಾಯಿತರು ನೀಡಿದ ಉತ್ತರವು ಸರಿಯಾದ ಉತ್ತರಕ್ಕೆ ಹತ್ತಿರ ಇರಬೇಕು).

ಆಯಾ ಪ್ರಶ್ನೆಗಳಿಗೆ IVR ನೀಡುವ ಆಯ್ಕೆಗಳಿಂದ ಮೇಲೆ ತಿಳಿಸಿದ ಪ್ರಶ್ನೆಗಳಿಗೆ ನೋಂದಾಯಿತರು ಉತ್ತರಿಸಿದ ನಂತರ ಮತ್ತು ಸರಿಯಾದ ಫಾರ್ಮಾಟ್ ಪ್ರಕಾರ, ನೋಂದಾಯಿತರು ಆಯ್ಕೆಯಾದರೆ ಮುಂದಿನ ಭಾಗವಹಿಸುವಿಕೆಗಾಗಿ ಕೆಲವು ದಿನಗಳ ನಂತರ ದೂರವಾಣಿ ಕರೆ ಸ್ವೀಕರಿಸುತ್ತಾರೆ.

*ಎಲ್ಲಾ ಪ್ರಶ್ನೆಗಳಿಗೆ ನೋಂದಾಯಿತರು ಇನ್ಪುಟ್ ನೀಡುವಂತೆ IVR ಕೇಳುತ್ತದೆ, ಹೀಗೆ ಕೇಳಿದ 6 ಸೆಕೆಂಡುಗಳಲ್ಲಿ ಇನ್ಪುಟ್ ಸ್ವೀಕರಿಸದಿದ್ದರೆ, IVR ಮತ್ತೊಮ್ಮೆ ಪ್ರಶ್ನೆಯನ್ನು ಪುನರಾವರ್ತಿಸುತ್ತದೆ. ಎರಡನೇ ಬಾರಿಯೂ ಯಾವುದೇ ಉತ್ತರವನ್ನು ಪಡೆಯದಿದ್ದರೆ, IVR ಮುಂದಿನ ಪ್ರಶ್ನೆಯನ್ನು ಕೇಳುತ್ತದೆ. ಒಂದು ಅಮಾನ್ಯವಾದ ಆಯ್ಕೆಯನ್ನು ಒದಗಿಸಿದರೆ, IVR ಮತ್ತೊಂದು ಪ್ರಯತ್ನವನ್ನು ನೀಡುತ್ತದೆ, ನಂತರ ಮುಂದಿನ ಪ್ರಶ್ನೆಗೆ ಹೋಗುತ್ತದೆ. ಇದಲ್ಲದೆ, ನೋಂದಾಯಿತ ಪ್ರತಿ ಬಾರಿ ಉತ್ತರದ ಆಯ್ಕೆಯನ್ನು ಎಂಟರ್ ಮಾಡಿದಾಗಲೂ, ಅವನಿಗೆ/ ಅವಳಿಗೆ ಅವನ/ಅವಳ ಆಯ್ಕೆಯನ್ನು ಕೇಳಿಸುತ್ತದೆ ಮತ್ತು ಅದನ್ನು ಖಚಿತಪಡಿಸಲು ಹೇಳುತ್ತದೆ.

**'ಉತ್ತರಕ್ಕೆ ಹತ್ತಿರವಾದ' ಪ್ರಶ್ನೆಯು ಮುಕ್ತ ಪ್ರಶ್ನೆಯಾಗಿದ್ದು (ಉದಾ: ಕಿಲೋ ಮೀಟರುಗಳಲ್ಲಿ ಮುಂಬೈ ಮತ್ತು ಆಗ್ರಾ ನಡುವಿ ದೂರ ಎಷ್ಟು) ಇದಕ್ಕಾಗಿ ನೋಂದಯಿತರು ಉತ್ತರ ಸಂಖ್ಯೆಯನ್ನು ನಮೂದಿಸಿ, ನಂತರ ಸ್ಟಾರ್ / ಹ್ಯಾಶ್ ಕೀಯನ್ನು ಒತ್ತಬೆಕು.

**<u>ಹಂತ 3</u>**

ಮೊದಲ ಸುತ್ತಿನ ಅವಧಿಗೆ **ಹಂತ 1** ಮತ್ತು **ಹಂತ 2** ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ, ಆಯ್ಕೆ ಮಾಡಲಾದ ಎಲ್ಲಾ ನೋಂದಾಯಿತರನ್ನು ಪೂರ್ವ ನಿರ್ಧಾರಿತ ಮೀಸಲಾತಿ ಮಾನದಂಡದ ಆಧಾರದ ಮೇಲೆ

ರಾಂಡಮ್ ಆಗಿ ಮೌಲ್ಯಮಾಪನ ಮಾಡಿ ಆಯ್ಕೆ ಮಾಡಲಾಗುತ್ತದೆ ಮತ್ತು ಸುಮಾರು 1500 ನೋಂದಿಯತರನ್ನು ಆಡಿಷನ್‌ಗೆ ಒಳಗುವವರಾಗಿ ಆಡಿಷನ್ ಸ್ಥಳಕ್ಕೆ ಹಾಜರಾಗಲು ಆಯ್ಕೆ ಮಾಡಲಾಗುತ್ತದೆ.

ನೋಂದಾಯಿತರು ಅಗತ್ಯವಿರುವ ಸಂಖ್ಯೆಗಿಂತ ಕಡಿಮೆ ಇದ್ದ ಸಂದರ್ಭದಲ್ಲಿ, ಅಗತ್ಯವಿರುವ ಸರಿಯಾದ ಉತ್ತರಗಳಿಗಿಂತ ಕಡಿಮೆ ಉತ್ತರ ನೀಡಿ ನೋಂದಾಯಿಸಿರುವವರನ್ನು ರಾಂಡಮ್ ಆಗಿ ಆಯ್ಕೆ ಮಾಡಬಹುದಾಗಿದೆ. ಟೈ ಸಂಭವಿಸಿದಾಗ, ಸರಿಯಾದ ಎಂಟ್ರಿಯನ್ನು ಆಯ್ಕೆ ಮಾಡಲು 'ಹತ್ತಿರದ' ಪ್ರಶ್ನೆಗಳಿಗೆ ನೀಡಿರುವ ಉತ್ತರವನ್ನು ಬಳಸಲಾಗುತ್ತದೆ.

ರಾಂಡಮೈಸರ್‌ನಿಂದ ಆಡಿಷನ್‌ಗೆ ಒಳಗಾಗುವವರಾಗಿ (ಪ್ರಥಮ ಸುತ್ತಿನ ಅವಧಿಗೆ) ಆಡಿಷನ್ ಸ್ಥಳಗಳಿಗೆ ಹಾಜರಾಗಲು ನೋಂದಾಯಿಸುವವರ ಆಯ್ಕೆಯು ಪೂರ್ವ ನಿರ್ಧಾರಿತ ಮೀಸಲಾತಿ ಮಾನದಂಡ ಮತ್ತು ಸಮಂಜಸವಾದ ಪ್ರಯತ್ನಗಳ ಆಧಾರದ ಮೇಲೆ ನಡೆಯುತ್ತದೆ.

| ಹಂತ ಎರಡು | | | | | | | | |
|---|---|---|---|---|---|---|---|---|
| ಹಂತ 2 ರ ಪ್ರಕ್ರಿಯೆಗೆ ಗ್ರಿಡ್ (ಶೇಕಡಾದಲ್ಲಿ) | | | ಪುರುಷರು | | | ಮಹಿಳೆಯರು | | |
| | | | 33.0% | | | 67.0% | | |
| | | | 18-25 | 26-35 | 36+ | 18-25 | 26-35 | 36+ |
| | | | 35% | 35% | 30% | 35% | 40% | 25% |
| ವಲಯ 1 | ಬೆಂಗಳೂರು | 30% | 3.5% | 3.5% | 3.0% | 7.0% | 8.0% | 5.0% |
| ವಲಯ 2.1 | ಮೈಸೂರು, ಮಂಗಳೂರು, ಹುಬ್ಬಳ್ಳಿ, ಉತ್ತರ ಕನ್ನಡ, ದಾವಣಗೆರೆ | 30% | 3.5% | 3.5% | 3.0% | 7.0% | 8.0% | 5.0% |
| ವಲಯ 2.2 | ಕರ್ನಾಟಕದ ಉಳಿದ ಭಾಗ | 40% | 4.6% | 4.6% | 4.0% | 9.4% | 10.7% | 6.7% |
| ಒಟ್ಟು | | | 100% | | | | | |

ಮೀಸಲಾತಿ ಗ್ರಿಡ್‌ನ ಒಂದು ನಿರ್ದಿಷ್ಟ ಸೆಲ್‌ನಲ್ಲಿ ಅಗತ್ಯವಾದ ಸಂಖ್ಯೆಯ ನೋಂದಣಿದಾರರಿಗಿಂತ ಕಡಿಮೆ ಇದ್ದಲ್ಲಿ, ಅದನ್ನು ಉಳಿದಿರುವ ನೋಂದಾಯಿಸಿತರಿಂದ ರಾಂಡಮೈಸರ್ ಮೂಲಕ ಆಯ್ಕೆ ಮಾಡಿ ಭರ್ತಿ ಮಾಡಲಾಗುತ್ತದೆ.

ಹೀಗೆ ಆಯ್ಕೆಯಾದವರಿಗೆ ಆಡಿಷನ್‌ಗಳಿಗಾಗಿ ಟೆಲಿಫೋನ್ ಮೂಲಕ CCE ಸೂಚಿಸುತ್ತಾರೆ ಮತ್ತು ಮುಂದಿನ ಪ್ರಕ್ರಿಯೆಗೆ ಹೋಗುವ ಮುನ್ನ ಅವರ ವಿವರಗಳನ್ನು (ವಯಸ್ಸು ಮತ್ತು ವಿಳಾಸ) ದೃಢೀಕರಿಸುತ್ತದೆ. ಈ ಕರೆಗೆ ಆಯ್ಕೆಯಾದ ನೋಂದಾಯಿತರು ಒದಗಿಸಿದ ವಿವರಗಳು ಅವರು ನೀಡಿರುವ ಅಸ್ತಿತ್ವದಲ್ಲಿರುವ ವಿವರಗಳಿಗೆ

ಹೊಂದಿಕೆಯಾಗದಿದ್ದರೆ, ಅಂತಹ ನೋಂದಾಯಿತರಿಗೆ ಪುನಃ ಒಂದು ಅವಕಾಶವನ್ನು ಮಾತ್ರ ನೀಡಲಾಗುವುದು, ನಂತರ ಕರೆಯನ್ನು ಕಡಿತಗೊಳಿಸಲಾಗುತ್ತದೆ.

ಆಡಿಷನ್ ದಿನಾಂಕ ಮತ್ತು ಸ್ಥಳದ ಕುರಿತು CCE ನೋಂದಾಯಿತರಿಗೆ ತಿಳಿಸುತ್ತಾರೆ ಮತ್ತು ಆಡಿಷನ್ ದಿನಾಂಕಗಳು ಮತ್ತು ಶೂಟ್ ದಿನಾಂಕಗಳಲ್ಲಿ ಅವನ/ಅವಳ ಲಭ್ಯತೆಯನ್ನು ಖಚಿತಪಡಿಸುತ್ತಾರೆ. ನೋಂದಾಯಿತರು ಆ ದಿನಾಂಕಗಳಲ್ಲಿ ಲಭ್ಯವಿಲ್ಲದ ಸಂದರ್ಭದಲ್ಲಿ ನೋಂದಾಯಿತರು ಈ ಪ್ರಕ್ರಿಯೆಯಲ್ಲಿ ಮುಂದುವರಿಯಲು ಅನುಮತಿ ನೀಡಲಾಗುವುದಿಲ್ಲ. ನೋಂದಾಯಿತರು ಲಭ್ಯವಿದ್ದಲ್ಲಿ, CCE ಯು ನೋಂದಾಯಿತರು ತಮ್ಮೊಂದಿಗೆ ಈ ಕೆಳಗಿನ ದಾಖಲೆಗಳನ್ನು ತೆಗೆದುಕೊಂಡು ಬರಬೇಕೆಂದು ಹೇಳುತ್ತಾರೆ:

1) ನೋಂದಾಯಿತರ ಇತ್ತೀಚಿನ 4 ಪಾಸ್ ಪೋರ್ಟ್ ಗಾತ್ರದ ಬಣ್ಣದ ಭಾವಚಿತ್ರಗಳು

2) ಮಾನ್ಯವಾದ ಹೆಸರಿನ ಪುರಾವೆಗಾಗಿ (ಕೆಳಗಿನ ಯಾವುದಾದರೂ ಒಂದು):

1 ಪಾನ್ ಕಾರ್ಡಿನೊಂದಿಗೆ ಜನನ ಪ್ರಮಾಣಪತ್ರ

2. ಪಾಸ್ ಪೋರ್ಟ್

3. ಮತದಾರ ID

4. ಚಾಲನಾ ಪರವಾನಗಿ, ಅಥವಾ

5. UID / ಆಧಾರ್ ಕಾರ್ಡ್

3) ಮಾನ್ಯ ವಿಳಾಸದ ಪುರಾವೆಗಾಗಿ (ಕೆಳಗಿನ ಯಾವುದಾದರೂ ಒಂದು):

1. ಲ್ಯಾಂಡ್ ಲೈನ್ ಫೋನ್ / ವಿದ್ಯುತ್ ಬಿಲ್

2. ಪಾಸ್ ಪೋರ್ಟ್

3. ಮತದಾರ ID

4. ಚಾಲನಾ ಪರವಾನಗಿ

5. ರೇಷನ್ ಕಾರ್ಡ್ ಅಥವಾ

6. UID / ಆಧಾರ್ ಕಾರ್ಡ್

4) ನಾಲ್ಕು ಫೋನ್-ಎ-ಫ್ರೆಂಡ್/ವಿಡಿಯೋ ಕಾಲ್ ಅಭ್ಯರ್ಥಿ/ಗಳ ಹೆಸರು, ಅವರ 2 ಇತ್ತೀಚಿನ ಪಾಸ್ ಪೋರ್ಟ್ ಗಾತ್ರದ ಬಣ್ಣದ ಭಾವಚಿತ್ರಗಳು. ಫೋನ್-ಎ-ಫ್ರೆಂಡ್/ವಿಡಿಯೋ ಕಾಲ್ ಅಭ್ಯರ್ಥಿ/ಗಳು 18 ವರ್ಷಕ್ಕಿಂತ ಮೇಲ್ಪಟ್ಟವರಾಗಿರಬೇಕು, ಭಾರತದಲ್ಲಿ ವಾಸಿಸುತ್ತಿರಬೇಕು ಮತ್ತು ಭಾರತೀಯ ಪ್ರಜೆಯಾಗಿರಬೇಕು.

ಆಡಿಷನ್‌ಗೆ ಒಳಗಾಗುವವರು ಮೂಲ ದಾಖಲೆಗಳು ಮತ್ತು ಪ್ರತಿಯೊಂದು ದಾಖಲೆಯ 2 ದೃಢೀಕೃತ ಪ್ರತಿಗಳನ್ನು ತೆಗೆದುಕೊಂಡು ಬರಬೇಕು. ಮೇಲಿನ ಎಲ್ಲಾ ದಾಖಲೆಗಳು ಕನ್ನಡ / ಹಿಂದಿ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಇರಬೇಕು.

(ಮೇಲೆ ಹೇಳಲಾದ ದಾಖಲೆಗಳು / ಫೋನ್-ಎ-ಫ್ರೆಂಡ್/ವಿಡಿಯೋ ಕಾಲ್ ಅಭ್ಯರ್ಥಿಗಳ ಫೋಟೋಗಳನ್ನು ಸಲ್ಲಿಸುವುದು ಆಡಿಷನ್ ಗೆ ಒಳಗಾಗುವವರು ಮುಂದಿನ ಭಾಗವಹಿಸುವಿಕೆಗೆ ಆಯ್ಕೆಯಾಗಿದ್ದಾರೆ ಎಂದು ಅರ್ಥವಲ್ಲ.)

ಗಮನಿಸಿ: ಆಡಿಷನ್‌ಗೆ ಭಾಗವಹಿಸಲು ಪ್ರಯಾಣ, ವಸತಿ ಮತ್ತು ಇತರ ಎಲ್ಲ ಖರ್ಚುಗಳು, ಆಡಿಷನ್‌ಗೆ ಒಳಗಾಗುವವರದ್ದೇ ಆಗಿರುತ್ತದೆ ಮತ್ತು ಆಡಿಷನ್‌ಗೆ ಒಳಗಾಗುವವರು ಸೂಚಿಸಲಾದ ದಾಖಲೆಗಳು ಮತ್ತು ಭಾವಚಿತ್ರಗಳನ್ನು ಸಲ್ಲಿಸಿದಾಗ, ಅವರಿಗೆ ಮಾತ್ರ ಆಡಿಷನ್ ಸ್ಥಳಕ್ಕೆ ಪ್ರವೇಶಿಸಲು ಅನುಮತಿ ನೀಡಲಾಗುತ್ತದೆ.

ನಂತರ CCE ಗೊತ್ತುಪಡಿಸಿದ ಆಡಿಷನ್ ದಿನಾಂಕ ಮತ್ತು ಸ್ಥಳದಲ್ಲಿ ನೋಂದಾಯಿತರ ಲಭ್ಯತೆಯನ್ನು ದೃಢೀಕರಿಸಲು ಕೇಳುತ್ತಾರೆ ಮತ್ತು ನೀಡಲಾದ ಶೂಟ್ ದಿನಾಂಕಗಳಿಗೆ ಅವರ ಲಭ್ಯತೆಯನ್ನು ಕೂಡಾ ಕೇಳುತ್ತದೆ. ನೋಂದಾಯಿತರು ಅದನ್ನು ದೃಢೀಕರಿಸಿದ ನಂತರ ಆಡಿಷನ್‌ನಲ್ಲಿ ಪಾಲ್ಗೊಳ್ಳುವಿಕೆಯನ್ನು ಪರಿಗಣಿಸಲಾಗುತ್ತದೆ.

**<u>ಹಂತ 4</u>**

ಮೊದಲ ಸುತ್ತಿನ ಅವಧಿಗೆ ಆಡಿಷನ್ ಅನ್ನು 7 ಮೇ, 2019 ರಿಂದ ಆರಂಭವಾಗಿ 15 ಮೇ, 2019 ರವರೆಗೆ ನಡೆಸಲಾಗುತ್ತದೆ (**"ಮೊದಲ ಆಡಿಷನ್ ಅವಧಿ"**) ಮತ್ತು ಆಡಿಷನ್‌ಗೆ ಒಳಗಾಗುವವರ ನೋಂದಣಿಗಾಗಿ ಸಮಯಗಳನ್ನು ತಿಳಿಸಲಾಗುತ್ತದೆ ಮತ್ತು ಆಡಿಷನ್‌ಗೆ ಒಳಗಾಗುವವರ ಅವಶ್ಯಕತೆಗಳಿಗೆ ತಕ್ಕಂತೆ ಸಮಯ ಬದಲಾಯಿಸಲಾಗುವುದಿಲ್ಲ ಅಥವಾ ಮಾರ್ಪಡಿಸಲಾಗುವುದಿಲ್ಲ.

ಆಡಿಷನ್‌ಗೆ ಒಳಗಾಗುವವರು ಅಗತ್ಯವಿರುವ ದಾಖಲೆಗಳು ಮತ್ತು ಭಾವಚಿತ್ರಗಳೊಂದಿಗೆ (ಮೂಲ ಮತ್ತು ದೃಢೀಕರಿಸಿದ ಫೋಟೊಕಾಪಿ) ನಿಗದಿಪಡಿಸಲಾದ ದಿನಾಂಕ ಮತ್ತು ಸಮಯಕ್ಕೆ ಸರಿಯಾಗಿ ನಿಗದಿಪಡಿಸಲಾದ ಆಡಿಷನ್ ಸ್ಥಳದಲ್ಲಿ ಹಾಜರಿರಬೇಕು.

ಆಡಿಷನ್ ಸ್ಥಳದ ಗೇಟುಗಳನ್ನು ಬೆಳಗ್ಗೆ ೯ ಗಂಟೆಗೆ ಅಥವಾ ಕಂಪನಿಯು ತನ್ನ ವಿವೇಚನೆಯಿಂದ ನಿರ್ಧರಿಸುವ ಸಮಯಕ್ಕೆ ಮುಚ್ಚಲಾಗುತ್ತದೆ. ತಡವಾಗಿ ಬಂದವರು ಕಂಪನಿಯ ವಿವೇಚನೆಯಂತೆ ಆಡಿಷನ್ ಪ್ರಕ್ರಿಯೆಯಿಂದ ಅನರ್ಹರಾಗುತ್ತಾರೆ. ಆಡಿಷನ್‌ಗೆ ಒಳಗಾಗುವ ಪ್ರತಿಯೊಬ್ಬರಿಗೂ ವಿಶಿಷ್ಟವಾದ ನೋಂದಣಿ ಸಂಖ್ಯೆಯನ್ನು ನೀಡಲಾಗುವುದು, ಆಡಿಷನ್‌ನ ಎಲ್ಲಾ ಸಮಯದಲ್ಲೂ ಅವರು ಅದನ್ನು ತಮ್ಮೊಂದಿಗೆ ಹೊಂದಿರಬೇಕು. ಆಡಿಷನ್‌ನಲ್ಲಿ ಭಾಗವಹಿಸುವ ಸಲುವಾಗಿ ಬಿಡುಗಡೆ ಪತ್ರದೊಂದಿಗೆ, ನೋಂದಣಿ ನಮೂನೆ, NDA ಮತ್ತು ನಿಯಮಗಳು ಮತ್ತು ನಿಬಂಧನೆಗಳಿಗೆ ಸಹಿ ಮಾಡಬೇಕಾಗುತ್ತದೆ. ಕಂಪನಿಯ ಅಧಿಕೃತ ಪ್ರತಿನಿಧಿಗಳು ತಮ್ಮ ಸ್ವಂತ ವಿವೇಚನೆಯ ಮೇರೆಗೆ ನೋಂದಣಿ / ಅರ್ಹತೆಯನ್ನು ತಿರಸ್ಕರಿಸುವ ಅಂತಿಮ ಹಕ್ಕನ್ನು ಹೊಂದಿರುತ್ತಾರೆ.

ಕಂಪನಿಯು ಸೂಚಿಸಿದಂತೆ ಫಾರ್ಮಾಲಿಟಿಗಳನ್ನು ಪೂರ್ಣಗೊಳಿಸುವ ನಂತರ, ಆಡಿಷನ್‌ಗೆ ಒಳಗಾಗುವವರು ಎರಡು ಸುತ್ತಿನ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳಲಾಗುತ್ತದೆ. ಅವುಗಳೆಂದರೆ, ಲಿಖಿತ ಪರೀಕ್ಷೆ ಮತ್ತು ವೀಡಿಯೊ ಆಡಿಷನ್. ಆಡಿಷನ್‌ಗೆ ಒಳಗಾಗುವವರ ಲಿಖಿತ ಪರೀಕ್ಷೆ ಮತ್ತು ವೀಡಿಯೋ ಆಡಿಷನ್‌ಗಳನ್ನು ಪೂರ್ಣಗೊಳಿಸಲು ವಿಫಲವಾದಲ್ಲಿ ಅವನು/ಅವಳು ಮುಂದೆ ಬಾಗವಹಿಸದಂತೆ ಅನರ್ಹರಾಗುತ್ತಾರೆ.

**(i) ಲಿಖಿತ ಪರೀಕ್ಷೆ**

- ಆಡಿಷನ್‌ಗೆ ಒಳಗಾಗುವವರನ್ನು ಪ್ರವೇಶ ಪರೀಕ್ಷೆಗಾಗಿ ಒಂದು ಹಾಲ್‌ನಲ್ಲಿ ಕುಳಿತುಕೊಳ್ಳಲು ಹೇಳಲಾಗುತ್ತದೆ.
- ಕೊಠಡಿಯ ಬಾಗಿಲುಗಳನ್ನು ಬೆಳಗ್ಗೆ ೯.೦೦ ಕ್ಕೆ ಅಥವಾ ಕಂಪನಿಯು ತನ್ನ ವಿವೇಚನೆಯಿಂದ ನಿರ್ಧರಿಸುವ ಸಮಯಕ್ಕೆ ಮುಚ್ಚಲಾಗುತ್ತದೆ. ಅಂತಹ ಸಮಯದ ನಂತರ ಬರುವ ಆಡಿಷನ್‌ಗೆ ಒಳಗಾಗುವ ಅಭ್ಯರ್ಥಿಗಳು ಆಡಿಷನ್‌ನಲ್ಲಿ ಪಾಲ್ಗೊಳ್ಳುವ ಅರ್ಹತೆ ಹೊಂದಿರುವುದಿಲ್ಲ.
- ಆಡಿಷನ್ನಿಗೆ ಒಳಗಾಗುವವರಿಗೆ ಒಂದು ಪ್ರಶ್ನೆಪತ್ರಿಕೆ ಮತ್ತು ಉತ್ತರ ನೀಡಲು ಹಾಳೆಯನ್ನು ನೀಡಲಾಗುತ್ತದೆ. ಆಡಿಷನ್ನಿಗೆ ಒಳಗಾಗುವವರು ತಮ್ಮ ಆಯ್ಕೆಯ ಉತ್ತರಗಳನ್ನು (A / B / C / D) ತುಂಬಲು ಆಡಿಷನ್‌ಗೆ ಒಳಗಾಗುವವರಿಗೆ ನಿರ್ದಿಷ್ಟ ಸಮಯವನ್ನು ನೀಡಲಾಗುತ್ತದೆ.
- ಉತ್ತರಿಸಿದ ಹಾಳೆ ಕಳೆದುಹೋದಲ್ಲಿ, ಓದಲಾಗದೇ ಇದ್ದಲ್ಲಿ, ಅಪೂರ್ಣ ಅಥವಾ ಪತ್ತೆಹಚ್ಚಲಾಗದಿದ್ದಲ್ಲಿ, ಉದಾ., ಆಡಿಷನ್‌ಗೆ ಒಳಗಾಗುವವರ ಹೆಸರು / ಸಂಖ್ಯೆಯನ್ನು ನಮೂದಿಸದಿದ್ದಲ್ಲಿ, ಅಂತಹವರನ್ನು ಅನರ್ಹಗೊಳಿಸಲಾಗುವುದು

**(ii) ವಿಡಿಯೋ ಆಡಿಷನ್**

- ಆಡಿಷನ್‌ಗೆ ಒಳಗಾಗುವ ಪ್ರತಿಯೊಬ್ಬರೂ ವೈಯಕ್ತಿಕ ಸಂದರ್ಶನಕ್ಕೆ ಒಳಗಾಗಬೇಕಾಗುತ್ತದೆ.

- ಕಂಪನಿ/ನಿರ್ಮಾಪಕರು ಭವಿಷ್ಯದ ರೆಫರೆನ್ಸ್‌ಗಾಗಿ ವೀಡಿಯೊ ಆಡಿಷನ್‌ಗಳನ್ನು ಚಿತ್ರೀಕರಿಸಲಾಗುತ್ತದೆ.
- ರೆಕಾರ್ಡಿಂಗ್‌ನ ಯಾವುದೇ ಅನಿರೀಕ್ಷಿತ ನಷ್ಟ ಸಂಭವಿಸಿದಾಗ, ನಿರ್ಮಾಪಕರು ತಮ್ಮ ಸ್ವಂತ ತೀರ್ಮಾನದಂತೆ ಅಭ್ಯರ್ಥಿಗಳ ಪುನರಾವರ್ತಿತ ಆಡಿಶನ್ ಸೆಷನ್‌ಗಾಗಿ ಪನಃ ಬರಬೇಕೆಂದು ವಿನಂತಿಸಬಹುದು.
- ಯಾವುದೇ ಆಡಿಷನ್ ಕೇಂದ್ರದಲ್ಲಿ ಆಡಿಷನ್‌ಗೆ ಒಳಗಾಗುವವರ ಸಂಖ್ಯೆಯನ್ನು ಹೆಚ್ಚಿಸುವ / ಕಡಿಮೆಗೊಳಿಸುವ / ಬದಲಾಯಿಸುವ ಹಕ್ಕನ್ನು ನಿರ್ಮಾಪಕರು ಮತ್ತು ಕಂಪನಿ ಕಾಯ್ದಿರಿಸಿಕೊಳ್ಳುತ್ತವೆ.

ಆಡಿಷನ್‌ಗೆ ಒಳಗಾಗುವ ಎಲ್ಲರೂ ಆಡಿಷನ್ ಸ್ಥಳದ ಶಿಷ್ಟಾಚಾರವನ್ನು ಕಾಪಾಡಿಕೊಳ್ಳಬೇಕು ಮತ್ತು ಅಲ್ಲಿನ ನಿಯಮ ಮತ್ತು ನಿಬಂಧನೆಗಳು ಅನುಸರಿಸಬೇಕು. ಹಾಗೆಯೇ ಕಂಪನಿ/ನಿರ್ಮಾಪಕರ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಕಂಪನಿ ಅಥವಾ ನಿರ್ಮಾಪಕರ ಸೂಚನೆಗಳಿಗೆ ವ್ಯತಿರಿಕ್ತವಾಗಿ ವರ್ತಿಸುವ ಅಥವಾ ಕಂಪನಿಯ ಯಾವುದೇ ವ್ಯಕ್ತಿ  ಅಥವಾ ಬೇರೆ ಯಾವುದೇ ವ್ಯಕ್ತಿಗೆ ತೊಂದರೆ ನೀಡುವ ಆಡಿಷನ್‌ಗೆ ಒಳಗಾಗುವ ಯಾವುದೇ ವ್ಯಕ್ತಿಯನ್ನು ಆಡಿಷನ್‌ಗೆ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸದಂತೆ ತಕ್ಷಣವೇ ಅನರ್ಹಗೊಳಿಸಲಾಗುತ್ತದೆ ಮತ್ತು ಆಡಿಷನ್ ಸ್ಥಳದಿಂದ ಹೊರನಡೆಯಲು ಹೇಳಲಾಗುತ್ತದೆ.

ಆಡಿಷನ್‌ಗೆ ಸಂಬಂಧಿಸಿದಂತೆ ಕಂಪನಿ / ನಿರ್ಮಾಪಕರ ನಿರ್ಧಾರವು, ಆಡಿಷನ್‌ಗೆ ಒಳಗಾಗುವವರನ್ನು ಶಾರ್ಟ್‌ಲಿಸ್ಟ್ (ಪಟ್ಟಿ) ಮಾಡುವುದಕ್ಕೆ ಸೀಮಿತವಾಗಿರದೆ, ಅಂತಿಮ ಮತ್ತು ಬೈಂಡಿಂಗ್ ಆಗಿರುತ್ತದೆ ಮತ್ತು ಅದನ್ನು ಪ್ರಶ್ನಿಸುವಂತಿರುವುದಿಲ್ಲ. ಈ ಆಡಿಷನ್ ವಿಷಯದಲ್ಲಿ ಯಾವುದೇ ವಿವಾದ ಅಥವಾ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ, ಕಂಪನಿಯ ನಿರ್ಧಾರ ಅಂತಿಮವಾಗಿರುತ್ತದೆ ಮತ್ತು ಎಲ್ಲಾ ಸಂಬಂಧಪಟ್ಟವರಿಗೆ ನಿರ್ಬಂಧ ಹೇರುತ್ತದೆ.

**<u>ಹಂತ 5</u>**

- ಎರಡು ಸದಸ್ಯರ ತೀರ್ಪುಗಾರರು (ಜೂರಿ), ಅಂದರೆ ನಿರ್ಮಾಪಕರು ಮತ್ತು ಕಂಪನಿಯಿಂದ ತಲಾ ಒಬ್ಬೊಬ್ಬ ಪ್ರತಿನಿಧಿ ಆಡಿಷನ್‌ಗೆ ಒಳಗಾದ ಎಲ್ಲರನ್ನೂ ಅವರ ಉತ್ತರ ಹಾಳೆಗಳು ಮತ್ತು ವೀಡಿಯೋ ಆಡಿಷನ್ ರೆಕಾರ್ಡ್ ಮಾಡಲಾದ ಫೂಟೇಜ್ ಅನ್ನು ಪರಿಶೀಲಿಸುವ ಮೂಲಕ ಮೌಲ್ಯಮಾಪನ ಮಾಡುತ್ತಾರೆ. ಈ ಮೌಲ್ಯಮಾಪನ ಸುತ್ತಿನಲ್ಲಿ ಆಯ್ಕೆಯಾದ ಆಡಿಷನ್‌ಗೆ ಒಳಗಾದವರನ್ನು 2ನೇ ಮೌಲ್ಯಮಾಪನದ ತೀರ್ಪುಗಾರರು ಮೌಲ್ಯಮಾಪನ ಮಾಡುತ್ತಾರೆ.

- ಎರಡನೆಯ ಮೌಲ್ಯಮಾಪನವನ್ನು ಮೂರು ಸದಸ್ಯರುಳ್ಳ ತೀರ್ಪುಗಾರರುದ ನಿರ್ಣಯಿಸುತ್ತಾರೆ, ಅಂದರೆ ನಿರ್ಮಾಪಕರು, ಕಂಪನಿ ಮತ್ತು ಸ್ವತಂತ್ರ ಸದಸ್ಯ (**"ಜಡ್ಜ್ ಗಳು"**). ಇಲ್ಲಿಯೂ ಆಡಿಷನ್‌ಗೆ ಒಳಗಾದವರ ಉತ್ತರ ಹಾಳೆಗಳು ಮತ್ತು ವೀಡಿಯೊ ಆಡಿಷನ್‌ನ ರೆಕಾರ್ಡ್ ಫೂಟೇಜುಗಳ ಆಧಾರದ ಮೇಲೆ ಭಾಗವಹಿಸುವವರನ್ನು ಆಯ್ಕೆಮಾಡುತ್ತಾರೆ. ಫಾಸ್ಟೆಸ್ಟ್ ಫಿಂಗರ್ ಫಸ್ಟ್ ಸುತ್ತಿಗೆ ಭಾಗವಹಿಸುವವರ ಎರಡು ಪಟ್ಟಿಯನ್ನು ಆಯ್ಕೆ ಮಾಡಲಾಗುವುದು, ಅದರಲ್ಲಿ ಒಂದು ಪಟ್ಟಿಯನ್ನು ಬದಲಿ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಫಾಸ್ಟೆಸ್ಟ್ ಫಿಂಗರ್ ಫಸ್ಟ್ ಸುತ್ತಿಗೆ ವಾರಕ್ಕೆ ಆಯ್ಕೆ ಮಾಡಬೇಕಾಗಿರುವ ಭಾಗವಹಿಸುವವರ ಸಂಖ್ಯೆ ಈ ಕೆಳಗಿನಂತಿರುತ್ತದೆ:

- ಪ್ರದರ್ಶನದ ಎರಡು ಸಂಚಿಕೆಗಳ ಸ್ಟ್ಯಾಕ್ ಗಾಗಿ 12 ಪಾರ್ಟಿಸಿಪೆಂಟ್‌ಗಳ ಒಂದು ಗುಂಪನ್ನು ಆಯ್ಕೆ ಮಾಡಲಾಗುತ್ತದೆ

ಇದರ ಜೊತೆಗೆ, ವಿಶೇಷ / ಸೆಲೆಬ್ರಿಟಿ ಸಂಚಿಕೆಗಳು / ವಾರಗಳು ಇರಲಿದ್ದು, ಇದಕ್ಕಾಗಿ ಸ್ಪರ್ಧಿಗಳ ಶಾರ್ಟ್ ಲಿಸ್ಟಿಂಗ್ ಅನ್ನು ಪ್ರೊಡಕ್ಷನ್ ಹೌಸ್ / ಚಾನೆಲ್, ಪರ್ಯಾಯ ಪ್ರಕ್ರಿಯೆ / ಕಾಸ್ಟಿಂಗ್ ಮೂಲಕ ನಿರ್ವಹಿಸುತ್ತವೆ.

ಕಂಪನಿಯ ಅವಶ್ಯಕತೆ ಮತ್ತು ಸೃಜನಶೀಲ ವಿವೇಚನೆಯ ಆಧಾರದ ಮೇಲೆ, ಶೋನ ಯಾವುದೇ ಕಂತುಗಳು / ವಾರದ ಫಾಸ್ಟೆಸ್ಟ್ ಫಿಂಗರ್ ಫಸ್ಟ್‌ಗಾಗಿ ಸ್ಪರ್ಧಿಗಳ ಅಂತಿಮ ಆಯ್ಕೆಯನ್ನು ಆಡಿಷನ್‌ಗೆ ಒಳಗಾದವರನ್ನು ಆಯ್ಕೆಮಾಡಲಾದ ಗುಂಪಿನಿಂದ ಶಾರ್ಟ್‌ಲಿಸ್ಟ್ ಮಾಡಲಾಗುತ್ತದೆ.

1. ನಿರ್ಮಾಪಕರ ಪ್ರತಿನಿಧಿಗಳು ("ಪ್ರತಿನಿಧಿಗಳು") ಫಾಸ್ಟೆಸ್ಟ್ ಫಿಂಗರ್ ಫಸ್ಟ್ ಸುತ್ತಿಗೆ ಆಯ್ಕೆಯಾದ ಪಾರ್ಟಿಸಿಪೆಂಟ್/ಗಳಿಗೆ ತಿಳಿಸುತ್ತಾರೆ ಮತ್ತು ಅವರ ವಿವರಗಳನ್ನು ದೃಢೀಕರಿಸಲು ಕೇಳುತ್ತಾರೆ (ಹೆಸರು, ಲಿಂಗ, ಹುಟ್ಟಿದ ದಿನಾಂಕ ಮತ್ತು ವಿಳಾಸ), ಅದರ ನಂತರ ಪ್ರತಿನಿಧಿಗಳು ಅಂತಿಮ ಚಿತ್ರೀಕರಣ ವೇಳಾಪಟ್ಟಿಯ ಆಧಾರದ ಮೇಲೆ ಚಿತ್ರೀಕರಣದ ದಿನಾಂಕ ಮತ್ತು ಅಗತ್ಯವಿರುವ ದಾಖಲೆಗಳ ಬಗ್ಗೆ ಆಯ್ಕೆಯಾ ಪಾರ್ಟಿಸಿಪೆಂಟ್/ಗಳಿಗೆ ತಿಳಿಸುತ್ತಾರೆ. ಬಾಗವಹಿಸುವ ಪ್ರತಿಯೊಬ್ಬರು ಮಾನ್ಯವಾದ ಇಂಗ್ಲಿಷ್ / ಕನ್ನಡ / ಹಿಂದಿಯ ಗುರುತಿನ ಪುರಾವೆಯನ್ನು ಮತ್ತು ತಮ್ಮ 3 ಪಾಸ್‌ಪೋರ್ಟ್ ಗಾತ್ರದ ಬಣ್ಣದ ಭಾವಚಿತ್ರಗಳನ್ನು ಸ್ಟುಡಿಯೋಗೆ ತರಲು ಕೋರುತ್ತಾರೆ. ಭಾಗವಹಿಸುವವರ ಅಥವಾ ಅವನ/ಅವಳ ಬೆಂಬಲಿತ ದಾಖಲೆಗಳ ಅಲಭ್ಯತೆ ಸಂದರ್ಭದಲ್ಲಿ, ಮುಂದೆ ಭಾಗವಹಿಸಲು ಅನುಮತಿ ನೀಡಲಾಗುವುದಿಲ್ಲ.

2. ಶೂಟ್‌ಗಾಗಿ, ಕಂಪನಿ ಅಥವಾ ನಿರ್ಮಾಪಕರು ಶೋನ ಸೃಜನಾತ್ಮಕ ಅವಶ್ಯಕತೆಗಳ ಆಧಾರದ ಮೇಲೆ ಶಾರ್ಟ್‌ಲಿಸ್ಟ್ ಮಾಡಿಕೊಳ್ಳಲಾದ ಪಾರ್ಟಿಸಿಪಂಟ್/ಗಳನ್ನು ಕ್ಲಸ್ಟರ್ ಮಾಡಬಹುದು. ಇದರ ಬಗ್ಗೆ ಯಾವುದೇ

ಪ್ರಶ್ನೆಗಳಿಗೆ ಅವಕಾಶ ಇರುವುದಿಲ್ಲ. ಯಾವುದೇ ವ್ಯಕ್ತಿ ಅಥವಾ ಸ್ಪರ್ಧಿ(ಗಳಿ)ಗೆ ಯಾವುದೇ ಕಾರಣಗಳು / ಸಮರ್ಥನೆಗಳನ್ನು ನೀಡದೆಯೇ ಕ್ಲಸ್ಟರ್ ಅನ್ನು ಬದಲಾಯಿಸುವ ಅಥವಾ ಮಾರ್ಪಡಿಸುವ ಹಕ್ಕನ್ನು ಕಂಪನಿಯು ಕಾಯ್ದಿರಿಸುತ್ತದೆ.

3. ಆಡಿಷನ್‌ಗೆ ಒಳಗಾಗಿ ಆಯ್ಕೆಯಾದವರು ಫಾಸ್ಟೆಸ್ಟ್ ಫಿಂಗರ್ ಫಸ್ಟ್ ಸುತ್ತಿಗೆ ತಮ್ಮ ಲಭ್ಯತೆಯನ್ನು ದೃಢೀಕರಿಸಿದ ನಂತರವಷ್ಟೆ ಅವನು / ಅವಳು ಈ ಸುತ್ತಿನ ಅರ್ಹತೆ ಪಡೆಯುತ್ತಾನೆ/ಳೆ.

4. ಆಯ್ಕೆಯಾದ ಪಾರ್ಟಿಸಿಪಂಟ್/ಗಳು ಸಂಚಿಕೆಯ ಚಿತ್ರೀಕರಣಕ್ಕಾಗಿ ಬೇರೆ ಯಾರನ್ನೂ ಕರೆದುಕೊಂಡು ಬರಲು ಅನುಮತಿ ನೀಡಲಾಗುವುದಿಲ್ಲ.

5. ಪಾರ್ಟಿಸಿಪಂಟ್/ಗಳು ಆಡಿಷನ್‌ಗೆ ತಮ್ಮ ಸ್ವಂತ ಖರ್ಚು ಮತ್ತು ರಿಸ್ಕ್‌ನಲ್ಲಿ ಪ್ರಯಾಣಿಸುತ್ತಾರೆ.

6. ಆಯ್ಕೆಯಾದ ಪಾರ್ಟಿಸಿಪಂಟ್/ಗಳ ಪ್ರಯಾಣ (ಅತಿ ಕಡಿಮೆ ಅಂತರದ ಮಾರ್ಗ) ಮತ್ತು ವಾಸ್ತವ್ಯಕ್ಕಾಗಿ ಹೋಟೆಲ್ ವ್ಯವಸ್ಥೆಯ ಜವಾಬ್ದಾರಿ ನಿರ್ಮಾಪಕರದ್ದಾಗಿರುತ್ತದೆ. ನಿರ್ಮಾಪಕರ ವಿವೇಚನೆಯ ಪ್ರಕಾರ ಪ್ರಯಾಣ ಮತ್ತು ವಾಸ್ತವ್ಯದ ವ್ಯವಸ್ಥೆಗಳನ್ನು ಮಾಡಲಾಗುತ್ತದೆ ಮತ್ತು ಈ ವಿಷಯದಲ್ಲಿ ಪಾರ್ಟಿಸಿಪಂಟ್ ಗಳ ಯಾವುದೇ ವಿನಂತಿಯನ್ನು ಪರಿಗಣಿಸಲಾಗುವುದಿಲ್ಲ. ಆದಾಗ್ಯೂ, ಬೆಂಗಳೂರಿನಲ್ಲಿ ವಾಸಿಸುವ ಪಾರ್ಟಿಸಿಪಂಟ್ (ಗಳಿ)ಗೆ ಕಂಪನಿ / ನಿರ್ಮಾಪಕರು ವಾಸ್ತವ್ಯದ ಯಾವುದೇ ವ್ಯವಸ್ಥೆಗಳನ್ನು ನೀಡುವ ಜವಾಬ್ದಾರಿ ಹೊಂದಿಲ್ಲ.

7. ಫಾಸ್ಟೆಸ್ಟ್ ಫಿಂಗರ್ ಫಸ್ಟ್ ಸುತ್ತಿನಲ್ಲಿ ಆಡಲು ಆಯ್ಕೆಯಾದ ಪಾರ್ಟಿಸಿಪಂಟ್/ಗಳು 2 (ಎರಡು) ಸಂಚಿಕೆಗಳಿಗೆ ಆಡಲು ಅರ್ಹರಾಗಿರುತ್ತಾರೆ. ಯಾವುದೇ ವಿಶೇಷ ಸಂಚಿಕೆಗಳ ಸಂದರ್ಭದಲ್ಲಿ ಅಥವಾ ನಿರ್ದಿಷ್ಟ ಸಂಚಿಕೆಯ ರದ್ದತಿಯ ಸಂದರ್ಭದಲ್ಲಿ, ಕಂಪನಿ ಅಥವಾ ನಿರ್ಮಾಪಕರು ತಮ್ಮ ವಿವೇಚನೆಯಿಂದ ನಿರ್ಧರಿಸಿದಂತೆ ಅಂತಹ ದಿನಗಳಂದು ಪಾರ್ಟಿಸಿಪಂಟ್/ಗಳು ಆಡಲು ಅರ್ಹರಾಗಿರುವುದಿಲ್ಲ.

**IV. ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳು**

1. ಮೇಲೆ ಹೇಳಲಾದ ಯಾವುದೇ ವಿಧಾನಗಳ ಮೂಲಕ ಎಂಟ್ರಿಗಳನ್ನು ಕಳುಹಿಸುವ ಮೂಲಕ ಸ್ಪರ್ಧೆಯಲ್ಲಿ ಭಾಗವಹಿಸುವಿಕೆಯನ್ನು ಈ ನಿಯಮಗಳು ಮತ್ತು ನಿಬಂಧನೆಗಳ ಸ್ವೀಕರಿಸಿದ್ದೀರಿ ಎಂದು ಪರಿಗಣಿಸಲಾಗುತ್ತದೆ.

2. ಭಾರತದ ವಯಸ್ಕ ನಾಗರಿಕರಿಗೆ ಸ್ಪರ್ಧೆ ತೆರೆದಿರುತ್ತದೆ, ಅಂದರೆ ಏಪ್ರಿಲ್ 20, 2019 ಕ್ಕೆ 18 ವರ್ಷ ವಯಸ್ಸನ್ನು ಪೂರ್ಣಗೊಳಿಸಿರಬೇಕು ಮತ್ತು ನಾಗರಿಕರು ಮಾನಸಿಕ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು. ವ್ಯಕ್ತಿಗಳು ಸ್ವತಃ ಸ್ಪರ್ಧೆಗೆ ಪ್ರವೇಶಿಸಬೇಕು ಮತ್ತು ಬದಲಿ ವ್ಯಕ್ತಿಯ ಮೂಲಕ ಎಂಟ್ರಿ/ಗಳನ್ನು ಸ್ವೀಕರಿಸಲಾಗುವುದಿಲ್ಲ, ಅವರ ಕುಟುಂಬದ ಸದಸ್ಯರಾಗಿದ್ದರೂ ಸಹ.

3. ಎಂಟ್ರಿ/ಗಳನ್ನು ವರ್ಗಾಯಿಸಲು ಸಾಧ್ಯವಿಲ್ಲ.

4. ಕಾಲಕಾಲಕ್ಕೆ ನೇಮಕಗೊಳ್ಳುವ ಕಂಪನಿಯ, ನಿರ್ಮಾಪಕರ, ಜಾಹೀರಾತು ಸಂಸ್ಥೆಯ ನೌಕರರು, ಆಡಿಟರ್ ಗಳು, ಕಂಪನಿಯ ಗುತ್ತಿಗೆದಾರರು, ಹಾಗೇಯೇ ಪ್ರಾಯೋಜಕರ ನೌಕರರು ಮತ್ತು ಅವರ ಹತ್ತಿರದ ಸಂಬಂಧದ ಕುಟುಂಬದ ಸದಸ್ಯರು; ಭಾರತೀಯ ಪ್ರಜೆಗಳಲ್ಲದ ವ್ಯಕ್ತಿಗಳು, ಅಥವಾ ಭಾರತದ ಹೊರಗೆ ವಾಸಿಸುವ ಭಾರತೀಯರು ಅಥವಾ ಆದಾಯ ತೆರಿಗೆ ಕಾಯಿದೆ, 1961 ರ ಪ್ರಕಾರ ಭಾರತ ನಿವಾಸಿಗಳ ವ್ಯಾಖ್ಯಾನದಡಿಯಲ್ಲಿ ಅರ್ಹತೆ ಪಡೆಯದವರು ಅಥವಾ ಮೌಖಿಕ ಕನ್ನಡದಲ್ಲಿ ಪ್ರಾವಿಣ್ಯತೆ ಹೊಂದಿಲ್ಲದವರು ಈ ಸ್ಪರ್ಧೆಗೆ ಪ್ರವೇಶಿಸಲು ಅನರ್ಹರಾಗಿರುತ್ತಾರೆ. ನಿರ್ಮಾಪಕರು / ಕಂಪನಿಯ ಕೋರಿಕೆಯ ಮೇರೆಗೆ ಸೂಕ್ತವಾದ ಸಮಯದೊಳಗೆ ಹೆಸರು, ವಿಳಾಸ ಮತ್ತು ಸರಿಯಾದ ಹುಟ್ಟಿದ ದಿನಾಂಕದ ಪುರಾವೆ ಸೇರಿದಂತೆ ಅರ್ಹತೆಯ ಪುರಾವೆ ಅಥವಾ ಅಫಿಡವಿಟ್ ಒದಗಿಸಲು ವಿಫಲವಾದರೆ ಅನರ್ಹತೆಗೆ ಕಾರಣವಾಗುತ್ತಾರೆ. ನಿರ್ಮಾಪಕರು / ಕಂಪನಿ ಅಥವಾ ಕಂಪನಿಯ ಉಪ-ಗುತ್ತಿಗೆದಾರರು ಮತ್ತು ಸ್ಪರ್ಧೆಯ ಮಾರಾಟಗಾರರೊಂದಿಗಿನ ಸಂಭಾಷಣೆಯ ಸಮಯದಲ್ಲಿ ಸ್ಪರ್ಧಿಗಳು ಒದಗಿಸಲಾದ / ನೀಡಲಾದ / ತಿಳಿಸಿದ ಮಾಹಿತಿಯಲ್ಲಿ ಲೋಪದೋಷ ಕಂಡುಬಂದಲ್ಲಿ ಮತ್ತು / ಅಥವಾ ಸ್ಪರ್ಧಿಯು ಒದಗಿಸಲಾದ ದಾಖಲೆಗಳಲ್ಲಿ ತಪ್ಪು ಮಾಹಿತಿ ಇದ್ದಲ್ಲಿ ಅಂತಹ ಸ್ಪರ್ಧಿಯನ್ನು ಅನರ್ಹಗೊಳಿಸುವ ಹಕ್ಕನ್ನು ಕಂಪನಿಯು ಕಾಯ್ದಿರಿಸಿದೆ.

5. ಸ್ಪರ್ಧಿಗಳು ಯಾವುದೇ ಇತರ ಮೂರನೇ ವ್ಯಕ್ತಿ / ಏಜೆನ್ಸಿಗಳೊಂದಿಗೆ ಯಾವುದೇ ವಿಶೇಷವಾದ ಒಪ್ಪಂದಗಳಿಗೆ ಒಳಪಟ್ಟಿಲ್ಲ ಅಥವಾ ಕಾನೂನಿನ ಅಡಿಯಲ್ಲಿ ಕಂಪನಿ ಅಥವಾ ಅದರ ಅಂಗಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಯಾವುದೇ ರೀತಿಯ ಅನರ್ಹ ಮಾರ್ಗವನ್ನು ಹಿಡಿದಿಲ್ಲ ಎಂದು ಪ್ರತಿನಿಧಿಸುತ್ತಾನೆ/ಳೆ.

6. ಈ ನಿಯಮಗಳು ಮತ್ತು ಷರತ್ತುಗಳಿಗನುಗುಣವಾಗಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಸ್ಪರ್ಧಿಗೆ ಸಂಪೂರ್ಣ ಕಾನೂನುಬದ್ಧ ಸಾಮರ್ಥ್ಯವಿದೆ ಎಂದು ಸ್ಪರ್ಧಿ/ಗಳು ಕಂಪನಿಗೆ ಪ್ರಮಾಣೀಕರಿಸಬೇಕು ಮತ್ತು ಖಾತರಿ ನೀಡಬೇಕು.

7. ಸ್ಪರ್ಧೆಗೆ ನೋಂದಾಯಿಸುವುದರ ಮೂಲಕ, ಸ್ಪರ್ಧಿ/ಗಳು ತಾವು ವೈದ್ಯಕೀಯವಾಗಿ ಸದೃಢರಾಗಿದ್ದೇವೆ ಮತ್ತು ನಾನು ಹಿಂದೆ ಅಥವಾ ಈಗ ಯಾವುದೇ ಮಾನಸಿಕ ಕಾಯಿಲೆಗಳನ್ನು ಹೊಂದಿಲ್ಲ ಎಂಬುದನ್ನು ಪ್ರತಿನಿಧಿಸುತ್ತಾರೆ. ಹಿಂದೆ ಅವರಿಗೆ ಯಾವುದೇ ಮಾನಸಿಕ ಕಾಯಿಲೆಗಳಿದ್ದರೆ ಅಥವಾ ಮಾನಸಿಕ ಕಾಯಿಲೆ, ಆತಂಕ, ಅಧಿಕ ರಕ್ತದೊತ್ತಡ, ಖಿನ್ನತೆ ಅಥವಾ ಇತರ ಯಾವುದೇ ವೈದ್ಯಕೀಯ ಸಮಸ್ಯೆಗಳಿಗೆ ಔಷಧಿ ತೆಗೆದುಕೊಳ್ಳುತ್ತಿದ್ದರೆ, ಅರ್ಹ ವೈದ್ಯರಿಂದ ಈ ಸ್ಪರ್ಧೆಯಲ್ಲಿ ಭಾಗವಹಿಸಲು ಈ ಸ್ಪರ್ಧಿ ಫಿಟ್ ಅಗಿದ್ದಾರೆ ಎಂದು ಘೋಷಿಸುವ ಪ್ರಮಾಣಪತ್ರದ ಪ್ರತಿಯನ್ನು ಪಡೆದು ಕಂಪನಿ / ನಿರ್ಮಾಪಕರಿಗೆ ಬಹಿರಂಗಪಡಿಸಬೇಕು.

8. ಸ್ಪರ್ಧಿ/ಗಳು ಯಾವುದೇ ರೀತಿಯ ಅನಾರೋಗ್ಯ, ವೈದ್ಯಕೀಯ ಸಮಸ್ಯೆಗಳು (ಅಂದರೆ: ಹೃದಯದ ಕಾಯಿಲೆ, ರಕ್ತದೊತ್ತಡ ಕಾಯಿಲೆ, ಗರ್ಭಾವಸ್ಥೆಯ ಅಂತಿಮ ಹಂತಗಳು, ಇತ್ಯಾದಿ) ಇತ್ಯಾದಿಗಳಿಂದ ಬಳಲುತ್ತಿದ್ದರೆ ಶೋಗೆ ಭಾಗವಹಿಸಲು ದೃಢೀಕರಿಸಲಾಗುವುದಿಲ್ಲ. ಭಾಗವಹಿಸಲುಲ್ಲೊಳ್ಳುವಿಕೆಗೆ ವೈದ್ಯಕೀಯವಾಗಿ ಫಿಟ್ ಆಗಿರುವವುದು ಸ್ಪರ್ಧಿ/ಗಳ ಜವಾಬ್ದಾರಿಯಾಗಿದೆ. ಆದಾಗ್ಯೂ, ಸ್ಪರ್ಧೆಯ ಸ್ಟುಡಿಯೋ ಭಾಗದಲ್ಲಿ ಅವರ ಭಾಗವಹಿಸುವಿಕೆಯ ಬಗ್ಗೆ ಅಂತಿಮ ನಿರ್ಧಾರವು ಸಂಪೂರ್ಣವಾಗಿ ಕಂಪನಿಗೆ ಸೇರಿರುತ್ತದೆ.

9. ಯಾವುದೇ ಕ್ರಿಮಿನಲ್ ಅಪರಾಧದಲ್ಲಿ ಮತ್ತು / ಅಥವಾ ಅಪರಾಧಕ್ಕೆ ಒಳಗಾದ ಮತ್ತು / ಅಥವಾ ವಿಚಾರಣೆಯ ಅಡಿಯಲ್ಲಿ ಅಥವಾ ಪೋಲೀಸ್ ಅಥವಾ ನ್ಯಾಯಾಂಗದ ಮೂಲಕ ತನಿಖೆಗೆ ಒಳಗಾಗಿಲ್ಲ ಎಂಬುದನ್ನು ಕಂಪನಿಗೆ ಬರವಣಿಗೆಯ ಮೂಲಕ ಬಹಿರಂಗಪಡಿಸಿಲ್ಲವೆಂಬುದನ್ನು ಮತ್ತು ಕಂಪನಿ ತಿಳಿಸುವ ಶೂಟಿಂಗ್ ದಿನಾಂಕಗಳಲ್ಲಿ ಪೋಲಿಸ್ ಅಥವಾ ಯಾವುದೇ ನ್ಯಾಯಾಲಯ ಸೇರಿದಂತೆ ಯಾವುದೇ ಅಧಿಕಾರಿಯ ಮುಂದೆ ಸ್ಪರ್ಧಿ/ಗಳು ಹಾಜರಾಗುವ ಅಗತ್ಯವಿಲ್ಲ ಮತ್ತು ಆಡಿಷನ್ ಅಥವಾ ಸ್ಪರ್ಧೆಯಲ್ಲಿ ಅವನ/ಅವಳ ಭಾಗವಹಿಸುವಿಕೆಯನ್ನು ತಡೆಯುವ ಯಾವುದೇ ಅಂಗವೈಕಲ್ಯ ವಿಲ್ಲ (ಆಯ್ಕೆ ಆದಲ್ಲಿ) ಎಂಬುದನ್ನು ಸ್ಪರ್ಧಿ/ಗಳು ಪ್ರತಿನಿಧಿಸುತ್ತಾರೆ

10. ಸ್ಪರ್ಧಿ/ಗಳು ತಾವು ಸ್ವಯಂಪ್ರೇರಣೆಯಿಂದ ಸ್ವತಂತ್ರವಾಗಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಆಯ್ಕೆಮಾಡಿಕೊಂಡಿದ್ದೇವೆ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸುವುದರಿಂದ ಉಂಟಾಗಬಹುದಾದ ಎಲ್ಲಾ ಅಪಾಯಗಳು, ವೆಚ್ಚಗಳು ಮತ್ತು ಪರಿಣಾಮಗಳನ್ನು ಎದುರಿಸಲು ಸಿದ್ಧರಿದ್ದೇವೆ ಎಂದು ಒಪ್ಪಿಕೊಳ್ಳುತ್ತಾರೆ.

11. ಪ್ರವೇಶ ಮತ್ತು ಭಾಗವಹಿಸುವಿಕೆಯ ನಿಯಮದ ಪ್ರಕಾರ ಸ್ಪರ್ಧೆಯಲ್ಲಿ ಭಾಗವಹಿಸುವವರು ಯಾವುದೇ ಕರಾರಿನ, ವಾಣಿಜ್ಯ, ಪ್ರಾಯೋಜಕತ್ವದ ಒಪ್ಪಂದಕ್ಕೆ (ರೆಕಾರ್ಡಿಂಗ್, ಪ್ರದರ್ಶನ ಮತ್ತು/ಅಥವಾ ಸರಕುಗಳ ಗುತ್ತಿಗೆಗಳು ಒಳಗೊಂಡಂತೆ ಆದರೆ ಸೀಮಿತವಾಗಿಲ್ಲದಂತೆ) ಅಥವಾ ಇತರ ವ್ಯವಸ್ಥೆ

ಉದಾಹರಣೆಗೆ ಯಾವುದೇ ಆಡಳಿತಾತ್ಮಕ ಕಂಪನಿಯೊಂದಿಗೆ ಅಥವಾ ಸಂಗೀತ ಅಥವಾ ಪ್ರದರ್ಶನ ಸಾಮರ್ಥ್ಯಗಳು ಅಥವಾ ಉತ್ಪನ್ನಗಳ ವಿಷಯದಲ್ಲಿ ಒಬ್ಬ ವ್ಯಕ್ತಿಯು ಸ್ಪರ್ಧಿಯ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸಲು ಅಥವಾ ಅವರ ಹೆಸರು, ಹೋಲಿಕೆ, ಪ್ರತಿರೂಪ ಅಥವಾ ಜೀವನಚರಿತ್ರೆಯ ವಿಷಯದಲ್ಲಿ ಸ್ಪರ್ಧಿಯ ಬಿಡುಗಡೆಯ ಫಾರ್ಮ್ ಅಥವಾ ನಿಯಮಗಳು ಮತ್ತು ನಿಯಮಾವಳಿಗಳು ಅಥವಾ ಬೇರೆ ಯಾವುದಾದರೂ ಉಲ್ಲಂಘನೆಗಳಿದ್ದಲ್ಲಿ, ಸ್ಪರ್ಧಿಯನ್ನು ಸ್ಪರ್ಧೆಯಲ್ಲಿ / ಕಾರ್ಯಕ್ರಮದಲ್ಲಿ ಅಥವಾ ಪ್ರಸಾರ, ಪ್ರಚಾರ, ಶೋಷಣೆ ಅಥವಾ ಪ್ರಾಯೋಜಕತ್ವದಲ್ಲಿ ಪಾಲ್ಗೊಳ್ಳುವುದನ್ನು ತಡೆಹಿಡಿಯುತ್ತದೆ.

12. ಪ್ರತಿಯೊಬ್ಬ ಸ್ಪರ್ಧಿಯು ಸ್ಪರ್ಧೆಯ ಸ್ಟುಡಿಯೋ ಭಾಗದ ಸಮಯದಲ್ಲಿ ವಿನ್ಯಾಸಕರ ಅಥವಾ ಕ್ರೀಡಾ ಲೋಗೊಗಳನ್ನು ಹೊಂದಿರುವ ಅಥವಾ ಸೆಲೆಬ್ರಿಟಿಯನ್ನು ಇಷ್ಟಪಡುವಕೆ, ಜೀವಂತವಾಗಿರು ಅಥವಾ ಸತ್ತವರ, ಯಾವುದೇ ರೀತಿಯ ಬಟ್ಟೆ ಅಥವಾ ವಸ್ತುಗಳನ್ನು ಧರಿಸುವಂತಿಲ್ಲ. ಹಾಗೆಯೇ ಸ್ಪರ್ಧಿಗಳು ಯಾವುದೇ ಸ್ಪರ್ಧಾತ್ಮಕ ಟಿವಿ ಚಾನೆಲ್ ಹೆಸರುಗಳನ್ನು ಅಥವಾ ಸ್ಪರ್ಧೆಯ ಪ್ರಾಯೋಜಕರ ಸ್ಪರ್ಧಿಗಳ ಹೆಸರುಗಳನ್ನು ಹಾಕಿಕೊಳ್ಳುವಂತಿಲ್ಲ ಅಥವಾ ಉಲ್ಲೇಖಿಸಲು ಅನುಮತಿ ಇಲ್ಲ.

13. ಭಾಗವಹಿಸುವುದಕ್ಕಾಗಿ ಎಂಟ್ರಿಗಳನ್ನು ಸ್ವೀಕರಿಸಿದರೆ, ಎಂಟ್ರಿ ಕಳುಹಿಸುವ ವ್ಯಕ್ತಿ ನಮಗೆ SMS ಕಳುಹಿಸಲು ಅಥವಾ ಅವರಿಗೆ / ಅವಳಿಗೆ ಕರೆ ಮಾಡಲು ಅನುಮತಿ ನೀಡಿದ್ದಾರೆ ಎಂದು ಭಾವಿಸಲಾಗುತ್ತದೆ, ಅಂತಹ ವ್ಯಕ್ತಿ ನ್ಯಾಷನಲ್ ಡೂ ನಾಟ್ ಕಾಲ್ ರೆಜಿಸ್ಟ್ರಿಯಲ್ಲಿ ನೋಂದಾಯಿಸಿದ್ದಾರ ಹೊರತಾಗಿಯೂ

14. ಸ್ಪರ್ಧೆಯ ಸ್ಟುಡಿಯೋ ಭಾಗಕ್ಕೆ ಸ್ಪರ್ಧಿಯು ಭಾಗವಹಿಸಲು ಸಾಧ್ಯವಾಗದಿದ್ದರೆ, ಅವನು / ಅವಳನ್ನು ಮುಂದೆ ಭಾಗವಹಿಸುವಿಕೆಯಿಂದ ಅನರ್ಹರಾಗುತ್ತಾರೆ.

**ಮಾಹಿತಿ**

15. ಸ್ಪರ್ಧಿಯು ತನ್ನ ವಯಸ್ಸು, ವಿಳಾಸ, ಹೆಸರು, ಫೋಟೋ ಐಡೆಂಟಿಟಿ ಮತ್ತು ರಾಷ್ಟ್ರೀಯತೆಯ ಪುರಾವೆಯಾಗಿ ಅಗತ್ಯವಾದ ಪೂರಕ ದಾಖಲಾತಿಗಳನ್ನು ಒದಗಿಸುವ ಅವಶ್ಯಕತೆಯಿದೆ. ಅಂದರೆ ಕಂಪನಿಗೆ ಅಗತ್ಯವಿರುವ (i) ಪಾಸ್ ಪೋರ್ಟ್ / ಚಾಲನಾ ಪರವಾನಗಿ ಅಥವಾ (ii) ಜನನ ಪ್ರಮಾಣಪತ್ರ ಅಥವಾ ರೇಷನ್ ಕಾರ್ಡಿನೊಂದಿಗೆ ಪಾನ್ ಕಾರ್ಡ್ ಅಥವಾ (iii) ಜನನ ಪ್ರಮಾಣಪತ್ರದೊಂದಿಗೆ ಆಧಾರ್ ಕಾರ್ಡ್ ಅಥವಾ (iv) ಆಧಾರ್ ಕಾರ್ಡ್ನ ಒಂದು ಮೂಲ ಮತ್ತು ಎರಡು ದೃಢೀಕೃತ ಫೋಟೋಕಾಪಿಗಳು. ಈ ದಾಖಲೆಗಳು ಇಂಗ್ಲಿಷ್ / ಹಿಂದಿ ಅಥವಾ ಕನ್ನಡ ಭಾಷೆಯಲ್ಲಿರಬೇಕು; ಮತ್ತು ಆಡಿಷನ್‌ಗೂ ಒಳಗಾಗುವವರ ಇತ್ತೀಚಿನ ನಾಲ್ಕು ಪಾಸ್ ಪೋರ್ಟ್ ಗಾತ್ರದ

ಬಣ್ಣದ ಭಾವಚಿತ್ರಗಳು, ಮತ್ತು ಫೋನ್-ಎ-ಫ್ರೆಂಡ್/ವಿಡಿಯೋ-ಕಾಲ್ ಅಭ್ಯರ್ಥಿಗಳ ಇತ್ತೀಚಿನ ಎರಡು ಪಾಸ್ ಪೋರ್ಟ್ ಗಾತ್ರದ ಬಣ್ಣದ ಭಾವಚಿತ್ರಗಳು.

16. ನೋಂದಣಿಯ ಸಮಯದಲ್ಲಿ ನೀಡಲಾದು ಮಾಹಿತಿಹ ಬಗ್ಗೆ ಯಾವುದೇ ರೀತಿಯ ಸ್ಪಷ್ಟೀಕರಣದ ಅಗತ್ಯವಿದ್ದಲ್ಲಿ ಕಂಪನಿ/ನಿರ್ಮಾಪಕರು ತಮ್ಮ ವಿವೇಚನೆಯಂತೆ ನೋಂದಾಯಿತರನ್ನು ಸಂಪರ್ಕಿಸುತ್ತಾರೆ.

17. ಯಾವುದೇ ಸಮಯದಲ್ಲಿ ಗುರುತಿನ ಮತ್ತು / ಅಥವಾ ಅರ್ಹತೆಯ ಪುರಾವೆಯನ್ನು ಕೇಳುವ ಹಕ್ಕು ಕಂಪನಿಗೆ ಇದೆ. ನಿಗದಿತ ಸಮಯದೊಳಗೆ ಅಂತಹ ಪುರಾವೆಗಳನ್ನು ಒದಗಿಸಲು ವಿಫಲವಾದರೆ ಸ್ಪರ್ಧಿಯು ಸ್ಪರ್ಧೆಯಿಂದ ಅನರ್ಹರಾಗುತ್ತಾದೆ.

18. ಸ್ಪರ್ಧೆಯ ಯಾವುದೇ ಸುತ್ತಿನಲ್ಲಿ ಸ್ಪರ್ಧಿ/ಗಳ ವಿವರಗಳ ಯಾವುದೇ ಹೊಂದಾಣಿಕೆಯಾಗದೇ ಇದ್ದು ಅಂತಹ ವ್ಯತ್ಯಾಸಗಳನ್ನು ಸ್ಪರ್ಧಿಯು ಪರಿಹರಿಸಲು ಸಾಧ್ಯವಾಗದಿದ್ದಲ್ಲಿ ಸ್ಪರ್ಧೆಯಲ್ಲಿ ಮುಂದುವರೆಯಲು ಅನರ್ಹರಾಗುತ್ತಾರೆ.

19. ಕಂಪನಿ ವಿನಂತಿಸಿದ ಮತ್ತು ಕಂಪನಿಗೆ ನೀಡಲಾದ ಪ್ರತಿ ಸ್ಪರ್ಧಿಯ ಎಲ್ಲಾ ವೈಯಕ್ತಿಕ ವಿವರಗಳು ಮತ್ತು ಮಾಹಿತಿಗಳು ಸತ್ಯವಾಗಿರಬೇಕು, ನಿಖರವಾಗಿರಬೇಕು ಮತ್ತು ದಾರಿ ತಪ್ಪಿಸುವಂತಿರಬಾರದು. ಯಾವುದೇ ಹಂತದಲ್ಲಿ ಸ್ಪರ್ಧಿ/ಗಳು ಸುಳ್ಳು, ಅಸಮರ್ಪಕ, ದಾರಿತಪ್ಪಿಸುವಂಥ ವೈಯಕ್ತಿಕ ವಿವರಗಳನ್ನು ಮತ್ತು / ಅಥವಾ ಮಾಹಿತಿಯನ್ನು ನೀಡಿದ್ದಲ್ಲಿ ಅಂತಹವರನ್ನು ಸ್ಪರ್ಧೆ ಅಥವಾ ಆಡಿಷನ್‌ನಿಂದ ಅನರ್ಹಗೊಳಿಸುವ ಹಕ್ಕನ್ನು ಕಂಪನಿಯು ಹೊಂದಿದೆ.

20. ಯಾವುದೇ ಸಮಯದಲ್ಲಿ, ಬಹುಮಾನ ವಿತರಣೆಯ ನಂತರವೂ, ಸ್ಪರ್ಧಿ/ಗಳು ಸಲ್ಲಿಸಿದ ಯಾವುದೇ ಮಾಹಿತಿ ತಪ್ಪಾಗಿದ್ದು, ಸುಳ್ಳು ಅಥವಾ ತಪ್ಪಾಗಿ ಪ್ರತಿನಿಧಿಸುವ ಅಥವಾ ತಪ್ಪು ದಾರಿಗೆಳೆಯುವಂತಹುದು ಎಂದು ಕಂಡುಬಂದರೆ, ಕಂಪನಿಯಿಂದ ಪಡೆದ ಎಲ್ಲಾ ಮೊತ್ತವನ್ನು ಮರುಪಾವತಿಸಲು ಸ್ಪರ್ಧಿ/ಗಳು ಹೊಣೆಗಾರರಾಗಿರುತ್ತಾರೆ.

21. ಕಂಪನಿಯು ಸ್ಪರ್ಧಿಗಳಿಂದ ಸಂಗ್ರಹಿಸಿದ ಎಲ್ಲಾ ಮಾಹಿತಿಯನ್ನು ಗೌಪ್ಯವಾಗಿ ಇರಿಸಿಕೊಳ್ಳಲು ಪ್ರಯತ್ನಿಸುತ್ತದೆ ಮತ್ತು ಆಯ್ಕೆಯಾದ ಸ್ಪರ್ಧಿಗಳನ್ನು ಆಹ್ವಾನಿಸುವ ಉದ್ದೇಶಕ್ಕಾಗಿ ನಿರ್ಮಾಪಕರೊಂದಿಗೆ ಈ ಮಾಹಿತಿಯನ್ನು ಹಂಚಿಕೊಳ್ಳುತ್ತದೆ. ಸ್ಪರ್ಧಾಳುಗಳನ್ನು ನಿರ್ಮಾಪಕರು ಅಥವಾ ನಿರ್ಮಾಪಕರ ಪರವಾಗಿ ಪ್ರಸ್ತುತ ಕಾರ್ಯಕ್ರಮದ ಉದ್ದೇಶಕ್ಕಾಗಿ ಮಾತ್ರ ಸಂಪರ್ಕಿಸಸಲಾಗುತ್ತದೆ ಎಂಬುದನ್ನು ಕಂಪನಿ

ಖಚಿತಪಡಿಸುತ್ತದೆ ಮತ್ತು ಸ್ಪರ್ಧಿಯು ಆಯ್ಕೆಯಾಗದಿದ್ದರೆ ಕಂಪನಿ / ನಿರ್ಮಾಪಕರು ಸಂಗ್ರಹಿಸಿದ ಎಲ್ಲಾ ಮಾಹಿತಿಯು ನಾಶವಾಗುತ್ತದೆ. ಹೀಗೆ ಸಂಗ್ರಹಿಸಿದ ಯಾವುದೇ ಮಾಹಿತಿಯನ್ನು ಪ್ರಸ್ತುತ ಸ್ಪರ್ಧೆಯ ಉದ್ದೇಶಕ್ಕಾಗಿ ಹೊರತುಪಡಿಸಿ ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ. ಸ್ಪರ್ಧಾಳುಗಳು ಮೇಲೆ ಹೇಳಲಾದ ಸೂಕ್ಷ್ಮವಾದ ವೈಯಕ್ತಿಕ ಮಾಹಿತಿಯನ್ನು ಒದಗಿಸುವ ಮೂಲಕ ಹೀಗೆ ಸಂಗ್ರಹಿಸಲಾದ ಮಾಹಿತಿಯನ್ನು ಕಂಪನಿಯು ಇತರ ಮೂರನೇ ವ್ಯಕ್ತಿಯೊಂದಿಗೆ ಮತ್ತು ಸ್ಪರ್ಧೆಯ ಉದ್ದೇಶಕ್ಕಾಗಿ ನಿರ್ಮಾಪಕರೊಂದಿಗೆ ಹಂಚಿಕೊಳ್ಳುವ ಹಕ್ಕನ್ನು ಹೊಂದಿದೆ ಎಂದು ಮತ್ತು ಹೀಗೆ ಸಂಗ್ರಹಿಸಿದ ವೈಯಕ್ತಿಕ ಮಾಹಿತಿಗಾಗಿ ಹಂಚಿಕೊಂಡದ್ದಕ್ಕಾಗಿ ಅವರು ಕಂಪನಿಯ ವಿರುದ್ಧ ಯಾವುದೇ ಯಾವುದೇ ಕ್ಲೈಮನ್ನು ಫೈಲ್ ಮಾಡುವುದಿಲ್ಲ ಎಂಬುದನ್ನು ಒಪ್ಪಿಕೊಂಡಿರುತ್ತಾರೆ.

**ಮಾಧ್ಯಮ ಮತ್ತು ಮೂರನೇ ವ್ಯಕ್ತಿಗಳೊಂದಿಗೆ ಮಾತನಾಡುವಿಕೆ**

22. ಯಾವುದೇ ಸ್ಪರ್ಧಿಗಳ ಮತ್ತು/ಅಥವಾ ಅವರ ಸ್ನೇಹಿತರು, ಸಂಬಂಧಿಗಳು, ಪರಿಚಯಸ್ಥರು ಕಂಪನಿಯ ಪೂರ್ವಲಿಖಿತ ಅನುಮೋದನೆಯಿಲ್ಲದೆ ಪತ್ರಿಕೆ ಅಥವಾ ಯಾವುದೇ ಮಾಧ್ಯಮ ಅಥವಾ ಯಾವುದೇ ಮೂರನೇ ವ್ಯಕ್ತಿಯೊಂದಿಗೆ ಸ್ಪರ್ಧೆಯ / ಕಾರ್ಯಕ್ರಮದ ಆಡಿಷನ್ ಅಥವಾ ಯಾವುದೇ ಅಂಶಗಳಿಗೆ ಸಂಬಂಧಿಸಿದ ವಿಷಯವನ್ನು ಮಾತನಾಡುವಂತಿಲ್ಲ ಅಥವಾ ಯಾವುದೇ ಸಂದರ್ಶನ ಅಥವಾ ಕಾಮೆಂಟ್ ಗಳನ್ನು ನೀಡಬಾರದು ಅಥವಾ ಅಥವಾ ಬ್ಲಾಗ್ ಗಳನ್ನು ಬರೆಯಬಾರದು, ಸಾಮಾಜಿಕ ನೆಟ್ವರ್ಕಿಂಗ್ ನಲ್ಲಿ ಅಂದರೆ ಫೇಸ್‌ಬುಕ್ ಮತ್ತು ಟ್ವಿಟರ್ ಕೂಡ ಸೇರಿದಂತೆ, ಆದರೆ ಇವುಗಳಿಗಷ್ಟೇ ಸೀಮಿತವಾಗಿರದೆ, ಯಾವುದೇ ಸಂದೇಶಗಳನ್ನು ಪೋಸ್ಟ್ ಮಾಡಬಾರದು. ಸ್ಪರ್ಧಿ/ಗಳು ಕಂಪನಿ / ನಿರ್ಮಾಪಕರಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಯಾವುದೇ ಇತರ ಪಕ್ಷದವರಿಗೆ ಬಹಿರಂಗಪಡಿಸಬಾರದು. ಈ ಷರತ್ತಿನ ಉಲ್ಲಂಘನೆಯು ತಕ್ಷಣವೇ ಸ್ಪರ್ಧಿಗಳನ್ನು ಮುಂದಕ್ಕೆ ಭಾಗವಹಿಸದಂತೆ ಅನರ್ಹಗೊಳಿಸುತ್ತದೆ.

23. ಸ್ಪರ್ಧಿ/ಗಳು ಎಲ್ಲಾ ಸಮಯದಲ್ಲೂ ಆಯ್ಕೆ ಪ್ರಕ್ರಿಯೆಯನ್ನು ಮತ್ತು ಆಡಿಷನ್‌ಗೆ ಕರೆಯಲಿರುವ ಅಥವಾ ಸ್ಪರ್ಧಾಳುವಾಗಲಿದ್ದೇನೆ ಅಥವಾ ಶಾರ್ಟ್‌ಲಿಸ್ಟ್ ಆಗಿರುವ ಸಾಂಭಾವ್ಯ ಅಭ್ಯರ್ಥಿಯಾಗಿದ್ದೇನೆ/ಳೆ ಎಂದು ತಿಳಿಸಲಾದ ಅಥವಾ ಗೊತ್ತಾದ ಯಾವುದೇ ಮತ್ತು ಎಲ್ಲಾ ವಿವರಗಳನ್ನು ಅವನು/ಅವಳು ಗೌಪ್ಯವಾಗಿ ಇಟ್ಟುಕೊಳ್ಳಬೇಕಾಗುತ್ತದೆ.

**<u>ಟೆಲಿಫೋನಿ</u>**

24. ಸ್ಪರ್ಧೆಯಲ್ಲಿ ಭಾಗವಹಿಸುವವ/ರು ತನ್ನ ಹೆಸರಿನಲ್ಲಿ ನೋಂದಣಿಯಾಗದೇ ಇರುವ ಸಾರ್ವಜನಿಕ ದೂರವಾಣಿ, ಅಥವಾ ಫೋನ್ ಅಥವಾ ಸಿಮ್ ಕಾರ್ಡನ್ನು ಬಳಸಿದಲ್ಲಿ ನೋಂದಾಯಿತ ಸ್ಪರ್ಧಿ/ಗಳು ಅನ್ನು ಪತ್ತೆ ಹಚ್ಚುವ ಜವಾಬ್ದಾರಿ ಕಂಪನಿಯುದ್ದಾಗಿರುವುದಿಲ್ಲ.

25. ಕಂಪನಿ ನೋಂದಾಯಿತ ಸ್ಪರ್ಧಿ/ಗಳನ್ನು ತಲುಪಲು ಸಾಧ್ಯವಾಗದಿದ್ದರೆ, ನೋಂದಾಯಿತ ಎಂಟ್ರಿಯನ್ನು ಅಮಾನ್ಯ ಎಂದು ಪರಿಗಣಿಸಲಾಗುತ್ತದೆ.

26. ಒಂದು ವೇಳೆ ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ದೂರವಾಣಿ ಸಂಖ್ಯೆ / ಮೊಬೈಲ್ ಸಂಖ್ಯೆಯಿಂದ ನೋಂದಾಯಿಸಿಕೊಂಡಿರುವ ಬಗ್ಗೆ ನಿಶ್ಚಿತವಾಗಿ ನಿರ್ಧರಿಸಲು ಸಾಧ್ಯವಾಗದಿದ್ದಲ್ಲಿ ಆ ಎಂಟ್ರಿಯನ್ನು ಅನರ್ಹಗೊಳಿಸಲಾಗುವುದು. ನೋಂದಾಯಿತ/ರು ತಮ್ಮದೇ ಆದ ಫೋನ್ ಸಂಖ್ಯೆಯನ್ನು ಬಳಸಲು ವಿನಂತಿಸಲಾಗಿದೆ.

27. ಭಾಗವಹಿಸುವ ಸಮಯದಲ್ಲಿ IVR ಅಥವಾ SMS ಸರ್ವರ್ ಅಥವಾ ಸಿಸ್ಟಮ್‌ನ ಯಾವುದೇ ವೈಫಲ್ಯಕ್ಕೆ, ಯಾವುದೇ ಕಾಲ್ ಡ್ರಾಪ್‌ಗೆ ಅಥವಾ ಅಥವಾ ನೋಂದಾಯಿತ/ರು ಸಲ್ಲಿಸಿದ ಯಾವುದೇ ಅಪೂರ್ಣ ದಾಖಲೆಗಳಿಗೆ ಕಂಪನಿ / ನಿರ್ಮಾಪಕರು ಹೊಣೆಗಾರರಾಗಿರುವುದಿಲ್ಲ.

28. SMS ಅಥವಾ IVR ಮೂಲಕ ಎಂಟ್ರಿಯನ್ನು ಸಲ್ಲಿಸಿದ ನಂತರ, ನೋಂದಾಯಿಸಿತ/ರು ಸಲ್ಲಿಸಲಾದ ಯಾವುದೇ ವಿವರಗಳನ್ನು / ಉತ್ತರವನ್ನು ಮಾರ್ಪಡಿಸಲು / ಬದಲಾಯಿಸಲು ಅನುಮತಿ ನೀಡುವುದಿಲ್ಲ.

29. ಚಾನೆಲ್‌ನಲ್ಲಿ ನೋಂದಣಿ ಪ್ರಶ್ನೆಗಳನ್ನು ಪ್ರಸಾರ ಮಾಡಿದ ನಂತರ ಸ್ವೀಕರಿಸಲಾದ ಎಂಟ್ರಿಗಳನ್ನು ಮಾತ್ರ ಮಾನ್ಯವೆಂದು ಪರಿಗಣಿಸಲಾಗುತ್ತದೆ. ಭಾಗವಹಿಸುವರಿಗೆ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಹೇಳಿರುವಂತೆ ಎಲ್ಲಾ ಎಂಟ್ರಿಗಳನ್ನು ಮೇಲೆ ಹೇಳಲಾದ ಸಮಯದ ಮಿತಿಗಳಲ್ಲಿ ಮತ್ತು ಫಾರ್ಮಾಟಿನಲ್ಲಿಯೇ ನಮೂದಿಸಿ ಕಳುಹಿಸಿರಬೇಕು.

30. ಸ್ಪರ್ಧಿ/ಗಳು SMS/ IVR ಮೂಲಕ ಮೂಲಕ ನೋಂದಾಯಿಸುವ ಕಾರಣದಿಂದಾಗಿ, ಅಂತಹ ಸ್ಪರ್ಧಿ/ಗಳು ಈ ಸ್ಪರ್ಧೆ ಅಥವಾ ಚಾನೆಲ್‌ಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಮತ್ತು ಪ್ರಚಾರದ ಸಂದೇಶಗಳನ್ನು ಸ್ವೀಕರಿಸಲು ಒಪ್ಪಿಕೊಂಡಿದ್ದಾರೆ ಎಂದು ಪರಿಗಣಿಸಲಾಗುತ್ತದೆ.

31. ಭಾಗವಹಿಸುವವರ ಮೊಬೈಲ್ / ಟೆಲಿಕಾಂ ಆಪರೇಟರ್ ವಿಧಿಸಬಹುದಾದ ಯಾವುದೇ ವೆಚ್ಚಕ್ಕೆ ಕಂಪನಿಯು ಜವಾಬ್ದಾರಿ ಹೊಂದಿರುವುದಿಲ್ಲ. ಈ ನಿಟ್ಟಿನಲ್ಲಿ ಯಾವುದೇ ಕ್ಲೈಮ್ ಅನ್ನು ಸ್ಪರ್ಧಿ/ಗಳು ಯಾವುದೇ ರೀತಿಯಲ್ಲೂ ಕಂಪನಿಯನ್ನು ಮಧ್ಯ ತರದೆ ಸಂಬಂಧಪಟ್ಟ ಮೊಬೈಲ್ / ಟೆಲಿಕಾಂ ಆಪರೇಟರ್‌ನಿಂದ ನೇರವಾಗಿ ಪರಿಹಾರ ಪಡೆಯಬೇಕು.

32. ದೂರವಾಣಿ ಸಿಸ್ಟಮ್ ನ ತೊಂದರೆಗಳನ್ನು ಆದಷ್ಟು ಕಡಿಮೆಗೊಳಿಸಲು, ಸಿಸ್ಟಮ್‌ಗಳ ಅಪ್‌ಟೈಮ್, ಡೇಟಾದ ಬ್ಯಾಕ್‌ಅಪ್, ಟೆಲಿಫೋನ್ ಸಿಸ್ಟಮ್ ಸಾಮರ್ಥ್ಯ, ಮತ್ತು ಇತರ ತಾಂತ್ರಿಕ ಅಡೆತಡೆಗಳನ್ನು ತಡೆಯಲು ಎಲ್ಲಾ ಸಮಂಜಸವಾದ ಕಾರ್ಯಸಾಧ್ಯ ವ್ಯವಸ್ಥೆಗಳನ್ನು ಮಾಡಲು ಕಂಪನಿಯು ಪ್ರಯತ್ನಿಸುತ್ತದೆ, ಆದರೆ ಇವೆಲ್ಲವೂ ಬಾಹ್ಯ ಯುಟಿಲಿಗಳು / ಸೇವಾ ಪೂರೈಕೆದಾರರನ್ನು ಅವಲಂಬಿಸಿರುವ ಕಾರಣದಿಂದಾಗಿ ಯಾವುದೇ ಖಾತ್ರಿಯನ್ನು ನೀಡಲಾಗುವುದಿಲ್ಲ.

33. ವಿಳಂಬಿತ ಸ್ವೀಕೃತಿ ಅಥವಾ ಸ್ವೀಕರಿಸದ ಅಥವಾ ಅಪೂರ್ಣ ಸ್ವೀಕೃತಿ ಅಥವಾ ನೋಂದಣಿ ಎಂಟ್ರಿಗಳ ಕರಪ್ಟ್ ಸ್ವೀಕೃತಿಗಳಿಗೆ ಕಂಪನಿ ಮತ್ತು ಅದರ ಉಪ-ಗುತ್ತಿಗೆದಾರರು ಹೊಣೆಗಾರರಾಗಿರುವುದಿಲ್ಲ.

34. ಟೆಲಿಕಾಮ್ ಆಪರೇಟರ್, ಸೌಲಭ್ಯ ಒದಗಿಸುವವರ ಮುಂತಾದವುಗಳ ವೈಫಲ್ಯ ಇತ್ಯಾದಿಗಳಿಂದ ಅಥವಾ ಸಾಮರ್ಥ್ಯ ನಿರ್ಬಂಧಗಳಿಂದಾಗಿ ಸ್ಪರ್ಧಿ/ಗಳು ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದಿದ್ದರೆ ಕಂಪನಿಯು ಯಾವುದೇ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ಜವಾಬ್ದಾರಿಯಲ್ಲ ಮತ್ತು / ಅಥವಾ ಯಾವುದೇ ರೀತಿಯಲ್ಲಿ ಹೊಣೆಯಾಗಿರುವುದಿಲ್ಲ.

<u>ಆಡಿಷನ್ ಗಳು</u>

35. ಆಡಿಷನ್‌ಗೆ ಒಳಪಡಿಸಲು ಎಷ್ಟು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೆಂಬುದು ಕಂಪನಿ / ನಿರ್ಮಾಪಕರ ಸಂಪೂರ್ಣ ವಿವೇಚನೆಗೆ ಬಿಟ್ಟದ್ದು.

36. ಅಗತ್ಯವಿರುವ ಎಲ್ಲಾ ಸ್ಥಳಗಳಲ್ಲಿ ಆಡಿಷನ್‌ಗಳ ನಂತರ ಕಂಪನಿ / ನಿರ್ಮಾಪಕರು ಭಾಗವಹಿಸುವವ/ರ ಪಟ್ಟಿಯನ್ನು ಸಿದ್ಧಪಡಿಸುತ್ತಾರೆ, ಅದರಲ್ಲಿ ಸ್ಪರ್ಧೆಯಲ್ಲಿ ಮುಂದಿನ ಆಯ್ಕೆ ಪ್ರಕ್ರಿಯೆಗಳಿಗೆ ಕೇವಲ ಸೀಮಿತ ಸಂಖ್ಯೆಯ ಪಾರ್ಟಿಸಿಪೆಂಟ್/ಗಳು ಆಯ್ಕೆಯಾಗುತ್ತಾರೆ.

37. ಸ್ಪರ್ಧೆಯ ಎಲ್ಲಾ ಹಂತಗಳಿಗೂ ಸೇರಿದಂತೆ ಸ್ಪರ್ಧಿ/ಗಳು ಒಮ್ಮೆ ಮಾತ್ರ ಸ್ಪರ್ಧೆಯ ಆಡಿಷನ್ ಸುತ್ತಿಗೆ ಬರಬೇಕಾಗುತ್ತದೆ. ಸ್ಪರ್ಧೆಯ ಫಾಸ್ಟೆಸ್ಟ್ ಫಿಂಗರ್ ಫಸ್ಟ್ ಸುತ್ತಿನಲ್ಲಿ ಒಮ್ಮೆ ಭಾಗವಹಿಸಿದ ಯಾವುದೇ ಸ್ಪರ್ಧಿಯು ಮತ್ತೊಮ್ಮೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹರಾಗಿರುವುದಿಲ್ಲ.

38. ಕಂಪನಿಯು ನಿರ್ಧರಿಸಿದಂತೆ ಆಡಿಷನ್‌ನ ಸಮಯವು ಷರತ್ತುಗಳು ಮತ್ತು ಅಗತ್ಯತೆಗಳಿಗೆ ಒಳಪಟ್ಟಿರುತ್ತವೆ ಮತ್ತು ಕಂಪನಿಯು ಯಾವುದೇ ಸ್ಪರ್ಧಿ ಅಥವಾ ಎಲ್ಲಾ ಸ್ಪರ್ಧಿಗಳಿಗೆ ಆಡಿಷನ್‌ನಲ್ಲಿ ಭಾಗವಹಿಸಲು ಸಾಧ್ಯವಿದೆ ಎಂದು ಯಾವುದೇ ಖಾತರಿ ಅಥವಾ ವಾಗ್ದಾನವನ್ನು ನೀಡುವುದಿಲ್ಲ.

39. ಮೇಲ್ಕಂಡ ನಿಬಂಧನೆಗಳ ಪ್ರಕಾರ ಸ್ಪರ್ಧಿ/ಗಳಿಗೆ ಆಡಿಷನ್ ಅಥವಾ ಸ್ಪರ್ಧೆಯಲ್ಲಿ ಭಾಗವಹಿಸಲು ಅನುಮತಿಸದ ಸಂದರ್ಭದಲ್ಲಿ ಉಂಟಾಗುವ  ಯಾವುದೇ ಹಾನಿ, ನಷ್ಟ, ಖರ್ಚು ವೆಚ್ಚಗಳು ಅಥವಾ ಇತರ ನೋವುಗಳಿಗೆ ಯಾವುದೇ ಕಂಪನಿಯು ಹೊಣೆಯಾಗಿರುವುದಿಲ್ಲ ಅಥವಾ ಜವಾಬ್ದಾರಿಯಲ್ಲ.

40. ಆಡಿಷನ್‌ಗಳಲ್ಲಿ ಭಾಗವಹಿಸಲು ಮಾಡಲಾಗುವ ಎಲ್ಲಾ ವೆಚ್ಚಗಳು ಆಡಿಷನ್‌ಗೆ ಒಳಗಾಗುವವರೆ ಭರಿಸಬೇಕು.

41. ಆಡಿಷನ್‌ಗೆ ಒಳಗಾಗುವವರೆ ಆಡಿಷನ್‌ಗೆ ನಿಗದಿಪಡಿಸಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಬಾರದೇ ಇದ್ದರೆ, ಅವನು / ಅವಳು ಮುಂದೆ ಭಾಗವಹಿಸುಕೆಯಿಂದ ಅನರ್ಹರಾಗಿರುತ್ತಾನೆ/ಳೆ.

42. ಆಡಿಷನ್ ದಿನಾಂಕ / ಸಮಯ ಮತ್ತು ಸ್ಥಳಗಳಲ್ಲಿ ಬದಲಾವಣೆಗಳಿಗೆ ಆಡಿಷನ್‌ಗೆ ಒಳಗಾಗುವವರ ಯಾವುದೇ ಕೋರಿಕೆಯನ್ನು ಕಂಪನಿ ಪರಿಗಣಿಸುವುದಿಲ್ಲ.

43. ಆಡಿಷನ್ ಪ್ರಕ್ರಿಯೆಯು ಒಂದಕ್ಕಿಂತ ಹೆಚ್ಚು ದಿನ ತೆಗೆದುಕೊಳ್ಳಬಹುದು ಮತ್ತು ಕಂಪನಿ / ಪ್ರತಿನಿಧಿಗಳ ಮಾಹಿತಿಯ ಪ್ರಕಾರ ಆಡಿಷನ್‌ಗೆ ಒಳಗಾಗುವವರು ಆಡಿಷನ್ ಪೂರ್ಣ ಅವಧಿಯವರೆಗೆ ಇರಬೇಕಾಗುತ್ತದೆ.

44. ಈ ಒಪ್ಪಂದದ ಯಾವುದೇ ಇತರ ನಿಬಂಧನೆಗಳನ್ನು ಹೊರತುಪಡಿಸಿ, ಕಂಪನಿಯು ತನ್ನ ಸ್ವಂತ ಮತ್ತು ಸಂಪೂರ್ಣ ವಿವೇಚನೆಯಂತೆ ಆಡಿಷನ್‌ಗಳನ್ನು ರದ್ದುಮಾಡಿಬಹುದು ಅಥವಾ ಬೇರೆ ದಿನಾಂಕಕ್ಕೆ ನಿಗದಿಪಡಿಸಬಹುದು, ಅಥವಾ ಕಂಪನಿಯು ನಿರ್ಧರಿಸಿದಂತೆ ಬೇರೆ ದಿನಾಂಕಗಳಲ್ಲಿ ಮತ್ತು ಸ್ಥಳಗಳಲ್ಲಿ ಹೆಚ್ಚುವರಿ ಆಡಿಷನ್ ಗಳನ್ನು ಮಾಡಬಹುದು. ಸ್ಪರ್ಧಿ(ಗಳು) ಕಂಪನಿ ನಿರ್ಧರಿಸಿದಂತೆ ಯಾವುದೇ ಮತ್ತು ಎಲ್ಲಾ ಸೂಚನೆಗಳು, ಅಗತ್ಯತೆಗಳು ಮತ್ತು ಸಮಯದ ಷರತ್ತುಗಳನ್ನು ಅನುಸರಿಸಬೇಕು ಮತ್ತು ಯಾವುದೇ ಮತ್ತು ಎಲ್ಲಾ ಹೆಚ್ಚುವರಿ ಆಡಿಷನ್ ಗಳಿಗೆ ಹಾಜರಾಗಬೇಕು.

45. ಆಡಿಷನ್ ಉದ್ದೇಶಕ್ಕಾಗಿ, ಆಡಿಷನ್‌ಗೆ ಒಳಗಾಗುವ ಒಬ್ಬರು ಮಾತ್ರ ಬರಬಹುದು, ಅಥವಾ ಮಾಧ್ಯಯಮದ ಸದಸ್ಯರಾಗಿರದ ಮತ್ತೊಬ್ಬ ವ್ಯಕ್ತಿ ಜೊತೆಗೆ ಬರಬಹುದು, ಆದರೆ ಯಾವುದೇ ಸಂದರ್ಭದಲ್ಲೂ ಅಭ್ಯರ್ಥಿಯನ್ನು ಹೊರತುಪಡಿಸಿ ಯಾವುದೇ ವ್ಯಕ್ತಿಗೆ ಆ ಸ್ಥಳಕ್ಕೆ ಪ್ರವೇಶಿಸಲು ಅವಕಾಶ ನೀಡಲಾಗುವುದಿಲ್ಲ.

46. ನೋಂದಾಯಿತರು ಮಾಧ್ಯಮ / ಪ್ರತಿಸ್ಪರ್ಧಿ ಚಾನಲ್‌ನ ಸದಸ್ಯರಾಗಿದ್ದಲ್ಲಿ ಅಂತಹವರನ್ನೂ ಭಾಗವಹಿಸುವಿಕೆಯನ್ನು ಅನರ್ಹಗೊಳಿಸುವ ಅಧಿಕಾರವನ್ನು ಕಂಪನಿ ಹೊಂದಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಎಲ್ಲಾ ನೋಂದಾಯಿತರ ಮೇಲೆ ನಿರ್ಬಂಧವನ್ನುಂಟು ಮಾಡುತ್ತದೆ.

47. ಆಡಿಷನ್ ಅಥವಾ ಶೂಟ್ ಮಾಡುವ ಸ್ಥಳಗಳಲ್ಲಿ ಆಡಿಷನ್‌ಗೆ ಒಳಗಾಗುವವರ ಕ್ಯಾಮೆರಾಗಳು ಮತ್ತು ಫೋಟೋಗ್ರಾಫಿಯನ್ನು ಅನುಮತಿಸುವುದಿಲ್ಲ.

48. ಆಡಿಷನ್‌ನಲ್ಲಿ ಆಯ್ಕೆಯಾಗಿರುವುದನ್ನು ಸ್ಪರ್ಧೆಯಲ್ಲಿ ಭಾಗವಹಿಸುವುದರತ್ತ ಒಂದು ಪ್ರಾಥಮಿಕ ಹೆಜ್ಜೆ ಮಾತ್ರ ಎಂಬುದನ್ನು ಸ್ಪರ್ಧಿ/ಗಳು ಅರ್ಥ ಮಾಡಿಕೊಳ್ಳಬೇಕು ಮತ್ತು ಸೃಜನಶೀಲ ಅವಶ್ಯಕತೆಗಳನ್ನು ಆಧರಿಸಿ ಭಾಗವಹಿಸುವಿಕೆಯನ್ನು ಅನುಮತಿಸುವುದು ಕಂಪನಿ / ನಿರ್ಮಾಪಕರ ಸಂಪೂರ್ಣ ವಿವೇಚನೆಗೆ ಬಿಟ್ಟ ವಿಷವಾಗಿರುತ್ತದೆ.

ಆಡಿಷನ್ ಸುತ್ತು 1 ರ ದಿನಾಂಕಗಳು ಮತ್ತು ಸ್ಥಳ ವಿವರಗಳು ಈ ಕೆಳಕಂಡಂತಿವೆ*

| ಆಡಿಷನ್ ನಗರಗಳು | ಆಡಿಷನ್ ದಿನಾಂಕಗಳು | ಆಡಿಟೋರಿಯಮ್ ಹೆಸರು | ಸ್ಥಳದ ವಿಳಾಸ |
|---|---|---|---|
| ಹುಬ್ಬಳ್ಳಿ | ಮೇ 7, 2019 | ಶೀಘ್ರದಲ್ಲೇ ಬರಲಿದೆ | ಶೀಘ್ರದಲ್ಲೇ ಬರಲಿದೆ |
| ದಾವಣಗೆರೆ | ಮೇ 9, 2019 | ಶೀಘ್ರದಲ್ಲೇ ಬರಲಿದೆ | ಶೀಘ್ರದಲ್ಲೇ ಬರಲಿದೆ |
| ಬೆಂಗಳೂರು | ಮೇ 11, 2019 | ಶೀಘ್ರದಲ್ಲೇ ಬರಲಿದೆ | ಶೀಘ್ರದಲ್ಲೇ ಬರಲಿದೆ |
| ಮೈಸೂರು | ಮೇ 13, 2019 | ಶೀಘ್ರದಲ್ಲೇ ಬರಲಿದೆ | ಶೀಘ್ರದಲ್ಲೇ ಬರಲಿದೆ |
| ಮಂಗಳೂರು | ಮೇ 15, 2019 | ಶೀಘ್ರದಲ್ಲೇ ಬರಲಿದೆ | ಶೀಘ್ರದಲ್ಲೇ ಬರಲಿದೆ |

*ಕಂಪನಿಯು ತನ್ನ ವಿವೇಚನೆಯಂತೆ ಆಡಿಷನ್ ದಿನಾಂಕ / ನಗರ / ಸ್ಥಳವನ್ನು ಬದಲಿಸುವ ಹಕ್ಕನ್ನು ಹೊಂದಿದೆ.

**ಶಾರ್ಟ್ ಲಿಸ್ಟ್ ಮಾಡುವಿಕೆ**

49. ನೋಂದಾಯಿತ/ರನ್ನು ಹೊರತುಪಡಿಸಿ, ಕಂಪನಿಯು ತನ್ನ ವಿವೇಚನೆಯಿಂದ ಕಾರ್ಯಕ್ರಮದ ಅಗತ್ಯತೆಗಳ ಆಧಾರದ ಮೇಲೆ, ಅಗತ್ಯವಿದ್ದಲ್ಲಿ ಅಥವಾ ಭಾಗವಹಿಸುವವರ ಆಯ್ಕೆ ಪ್ರಕ್ರಿಯೆ ಅಥವಾ ಸಿಸ್ಟಮ್ ವಿಫಲವಾದ ಸಂದರ್ಭದಲ್ಲಿ ನೋಂದಾಯಿಸದ ವ್ಯಕ್ತಿಗಳಿಗೂ ಆಡಿಷನ್ / ಸ್ಪರ್ಧೆಗೆ ಪ್ರವೇಶ ಅವಕಾಶವನ್ನು ನೀಡಬಹುದು.

50. ಕಂಪನಿಯು "ಸೆಲೆಬ್ರಿಟಿ ಸ್ಪೆಷಲ್ ಸಂಚಿಕೆಗಳು" ಅಥವಾ "ಸೀಸನಲ್ ಸ್ಪೆಷಲ್ ಸಂಚಿಕೆಗಳನ್ನು" ನಡೆಸುವ ಹಕ್ಕನ್ನು ಹೊಂದಿದ್ದು, ಇಲ್ಲಿ ಪ್ರಾಮುಖ್ಯತೆ ಹೊಂದಿರುವ ಕೆಲವು ವ್ಯಕ್ತಿಗಳನ್ನು ಶೋಗೆ ಆಹ್ವಾನಿಸಬಹುದಾಗಿದ್ದು, ಇವರು ಭಾಗವಹಿಸಲು ಆಯ್ಕೆ ಪ್ರಕ್ರಿಯೆಗೆ ಒಳಗಾಗಬೇಕಾಗಿಲ್ಲ ಹಾಗೆಯೇ ಇವರು ಕಂಪನಿಯು ಭಾಗವಹಿಸುವವರ ಆಯ್ಕೆ ಪ್ರಕ್ರಿಯೆಗೆ ಒಳಪಡಿಸಿ ಅಥವಾ ಒಳಪಡಿಸದೇ ಆಯ್ಕೆ ಮಾಡುವ ಸ್ಪರ್ಧಿಗೊಳಿಂದಿಗೆ (ಇದು ಕಂಪನಿಯ ಸ್ವಂತ ವಿವೇಚನೆ ಬಿಟ್ಟ ವಿಷಯವಾಗಿರುತ್ತದೆ) ಭಾಗಹಿಸಲಿದ್ದಾರೆ. "ಸೆಲೆಬ್ರಿಟಿ ಸ್ಪೆಷಲ್ ಸಂಚಿಕೆಗಳು" ಅಥವಾ "ಸೀಸನಲ್ ಸ್ಪೆಷಲ್ ಸಂಚಿಕೆಗಳು" ಅಥವಾ ಸ್ಪರ್ಧಿಗಳೊಂದಿಗೆ ನಡೆಸುವ "ಸ್ಪೆಷಲ್ ಸಂಚಿಕೆ"ಗಳಲ್ಲಿ ಭಾಗವಹಿಸುವವರ ಸಂಖ್ಯೆ ಮತ್ತು ಸಂಚಿಕೆಗಳ ಸಂಖ್ಯೆಯನ್ನು ಕಂಪನಿಯು ತನ್ನ ಸ್ವಂತ ವಿವೇಚನೆಯಿಂದ ನಿರ್ಧರಿಸುತ್ತದೆ.

51. ಶೋಗೆ ಅಂತಿಮವಾಗಿ ಆಯ್ಕೆಯಾದ ನಂತರವು ಕೂಡ ಕಂಪನಿ / ನಿರ್ಮಾಪಕರು ಸ್ಪರ್ಧೆ ಅಥವಾ ಪ್ರದರ್ಶನದ ಸುಧಾರಣೆಗೆ ತಮ್ಮ ವಿವೇಚನೆ ಮತ್ತು ಸೃಜನಾತ್ಮಕ ಅವಶ್ಯಕತೆಗಳ ಪ್ರಕಾರ ಯಾವುದೇ ಸದಸ್ಯರನ್ನು ಬದಲಿಸುವ ಹಕ್ಕನ್ನು ಹೊಂದಿರುತ್ತಾರೆ.

52. ಸ್ಪರ್ಧಿ/ಗಳು ಮತ್ತು / ಅಥವಾ ಸಾರ್ವಜನಿಕರಿಗೆ ಯಾವುದೇ ಪೂರ್ವ ಸೂಚನೆ ನೀಡದೆ ಪ್ರತಿ ಶೋಗೆ ಭಾಗವಹಿಸುವ ಸ್ಪರ್ಧಿಗಳ ಅನುಪಾತವನ್ನು ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸುವವರ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಹಕ್ಕನ್ನು ಕಂಪನಿಯು ಕಾಯ್ದಿರಿಸುತ್ತದೆ.

53. ಸ್ಪರ್ಧಿ/ಗಳು ತಮ್ಮ ಆಯ್ಕೆಯು ರಾಂಡಮ್ಮೈಸರ್ ಮತ್ತು ಆಯ್ಕೆಯ ತಂತ್ರಾಂಶವನ್ನು ಆಧರಿಸಿದೆ ಎಂಬುದನ್ನು ಅರ್ಥಮಾಡಿಕೊಂಡಿರುತ್ತಾರೆ.

54. ರಾಂಡಮ್ಮೈಸರ್ ಅಥವಾ ಆಯ್ಕೆಯ ತಂತ್ರಾಂಶದ ತರ್ಕವನ್ನು ಪರೀಕ್ಷಿಸಲು / ಆಡಿಟ್ ಮಾಡಲು / ಸವಾಲು ಮಾಡಲು ಸ್ಪರ್ಧಿ/ಗಳು ಅಥವಾ ಅವರ ಯಾವುದೇ ಪ್ರತಿನಿಧಿಗೆ ಅವಕಾಶ ನೀಡಲಾಗುವುದಿಲ್ಲ.

55. ಕಂಪನಿ ತನ್ನ ಸಂಪೂರ್ಣ ವಿವೇಚನೆಯಿಂದ ಸ್ಪರ್ಧೆಯ ಆಡಿಷನ್ / ಸ್ಟುಡಿಯೋ ಭಾಗದಲ್ಲಿ ಪಾಲ್ಗೊಳ್ಳದಂತೆ ಸ್ಪರ್ಧಿಗಳನ್ನು ಹೊರಗಿಡಬಹುದಾಗಿದ್ದು, ಕಾರಣಗಳು ಹೀಗಿರಬಹುದು, ಆದರೆ ಇಷ್ಟಕ್ಕೇ ಸೀಮಿತಿವಲ್ಲ i) ಕಂಪನಿಯ ದೃಷ್ಟಿಯಲ್ಲಿ ಸ್ಪರ್ಧಿಯು ಭಾಗವಹಿಸಲು ಅನರ್ಹ ಎನಿಸಿದ ಸಂದರ್ಭಗಳಲ್ಲಿ; (ii) ಸ್ಪರ್ಧಿಯ ಗುರುತನ್ನು ಸಾಬೀತುಪಡಿಸಲು ಕಂಪನಿ ನಿರ್ದಿಷ್ಟಪಡಿಸಿದ ದಾಖಲೆಯನ್ನು ಹಾಜರುಪಡಿಸಲು ವಿಫಲವಾದಲ್ಲಿ; (iii) ಕಂಪನಿಯ ವಿವೇಚನೆಯಂತೆ ಕಂಪನಿ, ಚಾನೆಲ್ ಅಥವಾ ಸ್ಪರ್ಧೆಗೆ ಪ್ರತಿಕೂಲ ಪರಿಣಾಮ ಬೀರುವ ಯಾವುದೇ ಇತರ ಕಾರಣ.

56. ಕಂಪನಿ / ನಿರ್ಮಾಪಕರು ವಿಫಲವಾದ ಸ್ಪರ್ಧಿಗಳಿಗೆ ತನ್ನ ನಿರ್ಧಾರವನ್ನು ಯಾವುದೇ ಸಮಯದಲ್ಲಾದರೂ ಸೂಚಿಸಬಹುದು.

57. (i) ಎಲ್ಲಾ ಸ್ಪರ್ಧಿ/ಗಳು ಶೋನಲ್ಲಿ ಮುಂದುವರೆಯುವಂತೆ (ii) ಸ್ಪರ್ಧೆಯ ಪ್ರತಿಯೊಂದು ಸಂಬಂಧಿತ ಹಂತದಲ್ಲಿ ಎಲ್ಲಾ ಸ್ಪರ್ಧಿಗಳನ್ನೂ ಸಂಪರ್ಕಿಸಲು ಕಂಪನಿಯು ಎಲ್ಲಾ ಸಮಂಜಸವಾದ ಪ್ರಯತ್ನಗಳನ್ನು ಮಾಡತ್ತದೆ, ಆದರೇ ಇದರ ಬಗ್ಗೆ ಕಂಪನಿ ಭರವಸೆ ನೀಡುವುದಿಲ್ಲ ಮತ್ತು ಕಂಪನಿಗೆ ಸ್ಪರ್ಧಿ/ಗಳನ್ನು ಯಶಸ್ವಿಯಾಗಿ ಸಂಪರ್ಕಿಸಲು ಮತ್ತು ಅವರೊಂದಿಗೆ ಸಂವಹನ ಮಾಡಲು ಸಾಧ್ಯವಾಗದಿದ್ದರೆ ಈ ನಿಯಮಗಳ ಅಡಿಯಲ್ಲಿ ಕಂಪನಿಯು ತನ್ನ ಸ್ವಂತ ವಿವೇಚನೆಯಿಂದ ಮುಂದಿನ ಸ್ಪರ್ಧಿ/ಗಳೊಂದಿಗೆ ಮುಂದುವರಿಯುತ್ತದೆ.

58. ಯಾವುದೇ ಕಾರಣದಿಂದಾಗಿ ಸ್ಪರ್ಧೆಗೆ ಹಾಜರಾಗಲು ಅಥವಾ ಭಾಗವಹಿಸಲು ಸಾಧ್ಯವಾಗದ ಸ್ಪರ್ಧಿಯ ಮೇಲೆ ಕಂಪನಿಯು ಯಾವುದೇ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ ಮತ್ತು ಇಂತಹ ಸಂದರ್ಭದಲ್ಲಿ ಕಂಪನಿಯ ತನ್ನ ವಿವೇಚನೆಯಂತೆ ಯಾವುದೇ ಸಮಯದಲ್ಲಾದರು ಸ್ಪರ್ಧಿ/ಗಳನ್ನು ಅನರ್ಹಗೊಳಿಸುವ, ಬದಲಾಯಿಸುವ ಅಧಿಕಾರವನ್ನು ಹೊಂದಿದೆ.

59. ಯಾವುದೇ ಸ್ಪರ್ಧಿ/ಗಳು ಯಾವುದೇ ಕಾರಣದಿಂದಾಗಿ ಕಾರ್ಯಕ್ರಮ ಮತ್ತು / ಅಥವಾ ಸ್ಪರ್ಧೆಯಲ್ಲಿ ಬದಲಿ ಸ್ಪರ್ಧಿಯ/ಗಳ ಬದಲಿಗೆ ಭಾಗವಹಿಸಲು ವಿಫಲವಾದಲ್ಲಿ ಅಥವಾ ಸಾಧ್ಯವಾಗದದಿದ್ದಲ್ಲಿ ಅಥವಾ ಅನರ್ಹಗೊಂಡಲ್ಲಿ ಅಂತಹವರ ಸ್ಥಾನಕ್ಕೆ ಸ್ಪರ್ಧಿಯ/ಗಳನ್ನು ಬದಲಾಯಿಸುವ ಹಕ್ಕನ್ನು ಕಂಪನಿ ಕಾಯ್ದಿರಿಸುತ್ತದೆ, ಸ್ಪರ್ಧೆಯಿಂದ ಹಿಂದೆ ಅನರ್ಹಗೊಂಡಿದ್ದ ಅಂತಹ ಬದಲಿ ಸ್ಪರ್ಧಿ/ಗಳನ್ನು ಪರಿಗಣಿಸದೆ ಇಬ್ಬರೂ ಸ್ಪರ್ಧಿಗಳು ಕಾರ್ಯಕ್ರಮ ಮತ್ತು / ಅಥವಾ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಕಂಪನಿಯು ಹೇಳಿದಾಗ ಭಾಗವಹಿಲು ಒಪ್ಪಬೇಕಾಗುತ್ತದೆ.

60. ಎರಡು (ಅಥವಾ ಹೆಚ್ಚಿನ) ಸ್ಪರ್ಧಿ/ಗಳ ನಡುವೆ ಟೈ ಆದಾಗ ಯಾವ ಸ್ಪರ್ಧಿ(ಗಳು)ಯನ್ನು / ಹೊರಹೋಗುತ್ತಾರೆ ಮತ್ತು/ಅಥವಾ ಯಾವ ಸ್ಪರ್ಧಿ/ಗಳು ಮುಂದಿನ ಸುತ್ತಿಗೆ (ಸರಿಹೊಂದುವ) ಅರ್ಹರಾಗಿದ್ದಾರೆ ಎಂಬುದನ್ನು ಕಂಪನಿಯು ತನ್ನ ಸ್ವಂತ ವಿವೇಚನೆಯಿಂದ ನಿರ್ಧರಿಸುವ ಹಕ್ಕನ್ನು ಪಡೆದಿದೆ ಮತ್ತು ಈ ಉದ್ದೇಶಕ್ಕಾಗಿ ಅಗತ್ಯವಿದ್ದಲ್ಲಿ ಸ್ಪರ್ಧಿಗಳಿಗೆ ಮುಂದಿನ ವ್ಯವಸ್ಥೆಗಳನ್ನು ಅಥವಾ ಮುಂದಿನ ಸುತ್ತುಗಳನ್ನು ನಡೆಸುವ ಸಂಪೂರ್ಣ ವಿವೇಚನೆಯನ್ನು ಕಂಪನಿಯು ಹೊಂದಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಮೌಖಿಕ ಅಥವಾ ಲಿಖಿತ ವಿಚಾರಣೆಗಳು ಮತ್ತು ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

61. ಕಳೆದುಹೋಗಿರುವ ಮತ್ತು ಕರಪ್ಟ್ ಆಗಿರುವ ನೋಂದಣಿ ಡೇಟಾವನ್ನು ಸುರಕ್ಷಿಸತಾಗಿಡಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು, ಆದರೆ ಇಂತಹ ಡೇಟಾದ ನಷ್ಟ ಸಂಭವಿಸಿದರೆ, ಮತ್ತು ಭಾಗವಹಿಸುವವರ ಆಯ್ಕೆ ಪ್ರಕ್ರಿಯೆಯ ಸಂಕೀರ್ಣವಾದ ಸಮಯ ಅವಧಿಯ ಕಾರಣದಿಂದ, ಕಂಪನಿಯು ತನ್ನ ಬಳಿ ಲಭ್ಯವಿರುವ ಡೇಟಾದೊಂದಿಗೆ ಅಥವಾ ಸಮಂಜಸವೆಂದು ಪರಿಗಣಿಸಬಹುದಾದ ಯಾವುದೇ ವಿಧಾನದೊಂದಿಗೆ ಮುಂದುವರೆಯಬೇಕಾಗುತ್ತದೆ.

**ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತು ವೈಯಕ್ತಿಕ ಮಾಹಿತಿಗೆ ಪ್ರವೇಶ**

62. ಕಂಪನಿಯ ಕೋರಿಕೆಯ ಮೇರೆಗೆ ಸ್ಪರ್ಧಿ/ಗಳು ತನ್ನ ಮನೆ, ಕೆಲಸದ ಸ್ಥಳ, ನೆಚ್ಚಿನ ಹ್ಯಾಂಗ್ಔಟ್ ಗಳು, ಸಾಕುಪ್ರಾಣಿಗಳು ಮುಂತಾದವುಗಳಿಗೆ ಆಕ್ಸೆಸ್ ಹೊಂದಲು ಮತ್ತು ಅವನ/ಅವಳ ಪೋಷಕರು, ಒಡಹುಟ್ಟಿದವರು, ಸ್ನೇಹಿತರು, ಸಹೋದ್ಯೋಗಿಗಳ ಛಾಯಾಚಿತ್ರ ತೆಗೆಯಲು, ಸಂದರ್ಶನ ಮಾಡಲು ಮತ್ತು ವೀಡಿಯೊ ರೆಕಾರ್ಡ್ ಮಾಡಲು ಅಥವಾ ಛಾಯಾಚಿತ್ರ ಕ್ಲಿಕ್ ಮಾಡಲು ಇತ್ಯಾದಿಗಳಿಗೆ ಅನುಮತಿ ಪಡೆಯಬೇಕು.

63. ಕಾರ್ಯಕ್ರಮ / ಸ್ಪರ್ಧೆಗೆ ಸ್ಪರ್ಧಿ/ಗಳ ಕೊಡುಗೆಯ ಭಾಗವಾಗಿ ಕಾರ್ಯಕ್ರಮ / ಸ್ಪರ್ಧೆಗೆ ಸಂಬಂಧಿಸಿದ ಯಾವುದೇ ಆನ್ಲೈನ್ / ಸಂವಾದಾತ್ಮಕ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ, ಅಂದರೆ ವೆಬ್-ಕ್ಯಾಸ್ಟ್ ಗಳು, ಸಂದರ್ಶನಗಳು ಮತ್ತು 'ಚಾಟ್ ರೂಮ್ ಗಳು' ಎಂದು ಕರೆಯಲಾಗುವ, ಆದರೆ ಇವಿಷ್ಟಕ್ಕೆ ಸೀಮಿತವಲ್ಲದ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ನಿರ್ಮಾಪಕರು ಸ್ಪರ್ಧಿ/ಗಳನ್ನು ಕೋರಬಹುದು. ಸ್ಪರ್ಧೆಯ ಪ್ರವೇಶ ಮತ್ತು ಪಾಲ್ಗೊಳ್ಳುವಿಕೆಗೆ ಮತ್ತಷ್ಟು ಷರತ್ತುಗಳಿದ್ದು ಸ್ಪರ್ಧಿ/ಗಳು ಯಾವುದೇ ಮತ್ತು ಎಲ್ಲಾ ಕೊಡುಗೆದಾರರೊಂದಿಗೆ  ಕಂಪನಿ / ನಿರ್ಮಾಪಕರು ಕಾಲಕಾಲಕ್ಕೆ ಮಾಡಿಕೊಂಡಿರುವ ಒಪ್ಪಂದ ಮತ್ತು ಬಿಡುಗಡೆ ನಮೂನೆ ಕುರಿತು ಖಚಿತಪಡಿಸಿಕೊಳ್ಳಬೇಕು ಮತ್ತು ಪಡೆದುಕೊಳ್ಳಬೇಕು.

64. ಸ್ಪರ್ಧೆಯಲ್ಲಿ ಗೆದ್ದವರು ಕಾಲಕಾಲಕ್ಕೆ ಕಂಪನಿಗೆ ತಾವು ಲಭ್ಯವಾಗಿರುತ್ತಾರೆ ಮತ್ತು ಯಾವುದೇ ಹಣ ಪಡೆಯದೆ ಯಾವುದೇ ರೀತಿಯ ಯಾವುದೇ ಚಟುವಟಿಕೆ ಮತ್ತು / ಅಥವಾ ಅಭಿಯಾನದಲ್ಲಿ ("ಪ್ರಚಾರ ಚಟುವಟಿಕೆ") ಭಾಗವಹಿಸಲು ಕಂಪನಿಯೊಂದಿಗೆ ಸಹಕರಿಸುತ್ತಾರೆ ಎಂದು ಒಪ್ಪುತ್ತಾರೆ. ಅಲ್ಲದೆ, ವಿಜೇತ/ರು  / ಸ್ಪರ್ಧಿ/ಗಳು ಯಾವುದೇ ಸಮಯದಲ್ಲಿಯೂ ಯಾವುದೇ ಕಾರಣಕ್ಕಾಗಿ ಕಂಪನಿ ಕೇಳುವ ಇಂತಹ ಯಾವುದೇ ಪ್ರಚಾರ ಚಟುವಟಿಕೆಯಲ್ಲಿ ಭಾಗವಹಿಸಲು ನಿರಾಕರಿಸುವುವುದಿಲ್ಲ ಅಥವಾ ಒಪ್ಪದೇ ಇರುವುದಿಲ್ಲ. ಯಾವುದೇ ರೀತಿಯ ಫುಟೇಜ್  ಕಂಪನಿಗೆ ಸೇರಿದ್ದು, ಅದರ ಎಲ್ಲಾ ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತು ಜಾಗತಿಕ ಮತ್ತು ಶಾಶ್ವತತೆಗೆ ಇರುವ ಯಾವುದೇ ಇತರ ಹಕ್ಕುಗಳನ್ನೂ ಒಳಗೊಂಡಂತೆ  ಆದರೆ

ಇಷ್ಟಕ್ಕೇ ಸೀಮಿತವಲ್ಲದೆ, ಎಲ್ಲವೂ ಕಂಪನಿಗೆ ಸೇರುತ್ತವೆ ಎಂದು ವಿಜೇತ/ರು / ಸ್ಪರ್ಧಿ/ಗಳು ಒಪ್ಪಿಕೊಳ್ಳುತ್ತಾರೆ.

65. ಕಂಪನಿ / ನಿರ್ಮಾಪಕರಿಗೆ ಸಲ್ಲಿಸಿದ ಯಾವುದೇ ಛಾಯಾಚಿತ್ರಗಳು, ವೀಡಿಯೋಗಳು ಅಥವಾ ಆಡಿಷನ್ ಅಥವಾ ನೋಂದಣಿ ಪ್ರಕ್ರಿಯೆಯ ಸಮಯದಲ್ಲಿ ನಿರ್ಮಾಪಕರು ದಾಖಲಿಸಿಕೊಂಡ ಅಥವಾ ಅವರಿಗೆ ಸಲ್ಲಿಸಿದ ದಾಖಲೆಗಳು ಕೆಯು ಕಂಪನಿಯ ಆಸ್ತಿಯಾಗಿ ಪರಿಣಮಿಸುತ್ತವೆ ಮತ್ತು ವಿಶ್ವದಾದ್ಯಂತ ಬಳಸಲು ಕಂಪನಿಗೆ ಲಭ್ಯವಿರುತ್ತವೆ. ಯಾವುದೇ ಸಾರ್ವಜನಿಕ ಡೊಮೇನ್‌ನಲ್ಲಿ ಅಥವಾ ಅವರ ಪ್ರದರ್ಶನಗಳಲ್ಲಿ ಸಲ್ಲಿಸಿದ ಫೋಟೋಗಳು ಅಥವಾ ವೀಡಿಯೊಗಳನ್ನು ಅಶ್ಲೀಲವಾಗಿಲ್ಲ, ಕೆಟ್ಟದಾಗಿಲ್ಲ, ಮರ್ಯಾದೆ ಹೋಗುವಂತಿಲ್ಲ, ಮಹಿಳೆಯರು ಅಥವಾ ಮಕ್ಕಳನ್ನು ನಿರಾಕರಿಸಿಲ್ಲ, ಧಾರ್ಮಿಕ ಭಾವನೆಗಳಿಗೆ ನೋಯಿಸಿಲ್ಲ, ಹಿಂಸಾಚಾರವನ್ನು ಚಿತ್ರಿಸಿಲ್ಲ ಅಥವಾ ಮೂರನೇ ವ್ಯಕ್ತಿಯ ಹಕ್ಕುಗಳನ್ನು ಉಲ್ಲಂಘಿಸಿಲ್ಲ ಎಂಬುದನ್ನು ಸ್ಪರ್ಧಿ/ಗಳು ಖಚಿತಪಡಿಸಿಕೊಳ್ಳಬೇಕು. ಮೇಲೆ ತಿಳಿಸಲಾದ ಯಾವುದೇ ಉಲ್ಲಂಘನೆಯ ಸಂದರ್ಭದಲ್ಲಿ, ಸ್ಪರ್ಧಿ/ಗಳು ಸ್ಪರ್ಧೆಗಳಲ್ಲಿ ಭಾಗವಹಿಸದಂತೆ ಅಥವಾ ಮುಂದಿನ ಯಾವುದೇ ಸುತ್ತುಗಳಲ್ಲಿ ತಕ್ಷಣವೇ ಅನರ್ಹರಾಗುತ್ತಾರೆ ಮತ್ತು ಅಂತಹ ಸ್ಪರ್ಧಿ/ಗಳು ಇದರಿಂದ ಉಂಟಾಗುವ ಯಾವುದೇ ಕ್ರಮಕ್ಕೆ (ಕ್ರಿಮಿನಲ್ / ಸಿವಿಲ್ ) ಒಳಗುತ್ತಾರೆ.

66. ಭಾಗವಹಿಸುವವರು / ಸ್ಪರ್ಧಿ/ಗಳು ಈ ನಿಯಮಗಳು ಮತ್ತು ನಿಬಂಧನೆಗಳನ್ನು ಒಪ್ಪಿದಲ್ಲಿ ಅವರು ಕಂಪನಿಗೆ ಅದರ ಅಂಗಸಂಸ್ಥೆಗಳು ಮತ್ತು ನಿರ್ಮಾಪಕರಿಗೆ ಸ್ಪರ್ಧಿ/ಗಳ ಛಾಯಾಚಿತ್ರಗಳನ್ನು ಕ್ಲಿಕ್ ಮಾಡಲು, ವೀಡಿಯೊಗಳನ್ನು ರೆಕಾರ್ಡ್ ಮಾಡಲು ಮತ್ತು ಸ್ಪರ್ಧಿ/ಗಳ ಹೆಸರು, ಛಾಯಾಚಿತ್ರಗಳು, ಪ್ರತಿರೂಪ, ಧ್ವನಿ ಮತ್ತು ಕಾಮೆಂಟುಗಳನ್ನು ವಿಶ್ವದಾದ್ಯಂತ ಯಾವುದೇ ಮಾಧ್ಯಮದಲ್ಲಿ ಜಾಹೀರಾತು ಮತ್ತು ಪ್ರಚಾರ ಉದ್ದೇಶಗಳಿಗಾಗಿ ಯಾವುದೇ ಹೆಚ್ಚುವರಿ ಪರಿಹಾರವಿಲ್ಲದೆ ಬಳಸಲು ಅನುಮತಿ ನೀಡಿದಂತೆ.

**ಪ್ರಶ್ನೆಗಳು ಮತ್ತು ಉತ್ತರಗಳು**

67. ಕಂಪನಿ ಅಥವಾ ನಿರ್ಮಾಪಕರು ಸ್ಪರ್ಧೆಯ ಯಾವುದೇ ಸುತ್ತಿನಲ್ಲಿ ಕೇಳಲಾಗುವ ಯಾವುದೇ ಪ್ರಶ್ನೆಗಳ ಉತ್ತರಗಳು ಮತ್ತು ಉತ್ತರಗಳ ಸತ್ಯಾಸತ್ಯತೆ ಅಥವಾ ಸರಿಯಾಗಿರುವಿಕೆಗೆ ಸಂಬಂಧಿಸಿದಂತೆ ಯಾವುದೇ ಕ್ಲೇಮುಗಳು / ಪ್ರಶ್ನೆಗಳಿಗೆ ಅವಕಾಶ ನೀಡುವುದಿಲ್ಲ.

68. ಯಾವುದೇ ಉತ್ತರದ ಸರಿಯಾಗಿರುವಿಕೆ ಅಥವಾ ತಪ್ಪಾಗಿರುವುದರ ಕುರಿತಾದ ಕಂಪನಿಯ ನಿರ್ಧಾರವು ಅಂತಿಮವಾಗಿರತ್ತದೆ ಮತ್ತು ಎಲ್ಲಾ ಸ್ಪರ್ಧಿಗಳು ಒಪ್ಪಬೇಕಾಗುತ್ತದೆ.

**ಭಾಗವಹಿಸುವಿಕೆ ಮತ್ತು ಸಾಗಣೆಗೆ ಸಂಬಂಧಿಸಿದ ವೆಚ್ಚಗಳು**

69. ಕಂಪನಿಯು ತಿಳಿಸಿದಂತಹ ಸ್ಥಳಗಳಲ್ಲಿ ನಡೆಯುವ ಆಡಿಷನ್‌ಗಳು ಬರಲು ಪ್ರಯಾಣ ಮತ್ತು ಸೌಕರ್ಯಗಳ ಎಲ್ಲಾ ವೆಚ್ಚಗಳನ್ನು, ಇಷ್ಟಕ್ಕೇ ಸೀಮಿತವಲ್ಲದೆ, ಆಡಿಷನ್‌ಗೆ ಒಳಗಾಗಲು ಆಯ್ಕೆಯಾಗಿರುವವರೆ ಭರಿಸಬೇಕು ಮತ್ತು ಇದಕ್ಕೆ ಕಂಪನಿ ಅಥವಾ ಅದರ ಉಪ-ಗುತ್ತಿಗೆದಾರರು ಹೊಣೆಯಲ್ಲ.

70. ಫಾಸ್ಟೆಸ್ಟ್ ಫಿಂಗರ್ ಫಸ್ಟ್‌ನ ಶೂಟ್‌ಗೆ ಹಾಜರಾಗಲು ಆಯ್ಕೆಯಾದ ಸ್ಪರ್ಧಿ/ಗಳ ಪ್ರಯಾಣ ಮತ್ತು ವಾಸ್ತವ್ಯದ ವ್ಯವಸ್ಥೆಯನ್ನು (ಬೆಂಗಳೂರಿನಲ್ಲಿ ವಾಸಿಸುವ ಭಾಗವಹಿಸುವವರನ್ನು ಹೊರತುಪಡಿಸಿ) ನಿರ್ಮಾಪಕರು ಮಾಡುತ್ತಾರೆ.

71. ವಿಮಾನ ನಿಲ್ದಾಣ / ರೈಲ್ವೆ ನಿಲ್ದಾಣ / ರಸ್ತೆ ಸಾರಿಗೆ ಇತ್ಯಾದಿಗಳಲ್ಲಿ ಅನಿವಾರ್ಯ ಕಾರಣ, ಸಾಗಣೆ ಸಮಸ್ಯೆಗಳು ಮತ್ತಿತರ ಸಮಸ್ಯೆಗಳಿಂದಾಗಿ ಅಥವಾ ಸ್ಪರ್ಧಿ/ಗಳಿಗೆ ನಿಯೋಜಿಸಲಾಗಿದ್ದ ವಿಮಾನ / ರೈಲು/ ಕಾರುಗಳ ರದ್ದತಿ ಮತ್ತು /ಅಥವಾ ವಿಳಂಬದ ಕಾರಣಗಳಿಗೆ ಕಂಪನಿ ಅಥವಾ ಯಾವುದೇ ಅಂಗಸಂಸ್ಥೆಗಳು ಹೊಣೆಗಾರರಾಗಿರುವುದಿಲ್ಲ ಮತ್ತು ಸ್ಪರ್ಧಿ/ಗಳು ಸ್ಪರ್ಧೆಗೆ ಸಂಬಂಧಿಸಿದ ಕಂಪನಿ ಮತ್ತು ಅದರ ಯಾವುದೇ ಅಂಗಸಂಸ್ಥೆಗಳು ಮತ್ತು/ಅಥವಾ ನಿರ್ಮಾಪಕರ ವಿರುದ್ಧ ಯಾವುದೇ ಕ್ಲೈಮ್ ಮಾಡುವಂತಿಲ್ಲ. ಇಂತಹ ಯಾವುದೇ ಸಂಭವನೀಯತೆಗಳಿಗೆ ಸ್ಪರ್ಧೆಗೆ ಸಂಬಂಧಿಸಿದ ಕಂಪನಿ ಅಥವಾ ಯಾವುದೇ ಅಂಗಸಂಸ್ಥೆಗಳು ಜವಾಬ್ದಾರರಾಗಿರುವುದಿಲ್ಲ ಮತ್ತು ಸ್ಪರ್ಧಿ/ಗಳು ಕಂಪನಿ / ನಿರ್ಮಾಪಕರಿಂದ ಯಾವುದೇ ಪರಿಹಾರವನ್ನು ಪಡೆಯದಿರಲು ವಾಗ್ದಾನ ಮಾಡುತ್ತಾರೆ.

72. ಶೋ / ಸ್ಪರ್ಧೆಯಲ್ಲಿ ತನ್ನ ನೋಂದಣಿ ಅಥವಾ ಭಾಗವಹಿಸುವಿಕೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸ್ಪರ್ಧಿ/ಗಳು ಅಥವಾ ಅವರ ಕುಟುಂಬ ಮಾಡಿದ ಯಾವುದೇ ಹೆಚ್ಚುವರಿ ಖರ್ಚುಗಳಿಗೆ ಕಂಪನಿಯು ಜವಾಬ್ದಾರಿಯಲ್ಲ.

**ಪ್ರಶಸ್ತಿ**

73. ಸ್ಪರ್ಧೆಯಲ್ಲಿ ಗೆಲ್ಲಬಹುದಾದ ಗರಿಷ್ಠ ಬಹುಮಾನ ರೂ .1,00,00,000 / - (ರೂ. ಒಂದು ಕೋಟಿ ಮಾತ್ರ).

74. ಭಾಗವಹಿಸಿದ ಪ್ರತಿಯೊಬ್ಬರೂ ಗರಿಷ್ಠ ಬಹುಮಾನದ ಹಣವನ್ನು ಗೆಲ್ಲುವುದು ಅನಿವಾರ್ಯವಲ್ಲ. ಸ್ಪರ್ಧೆಯ ಅಡಿಯಲ್ಲಿ ನೀಡಲಾಗುವ ಎಲ್ಲಾ ಪಾವತಿಗಳನ್ನು ಭಾಗವಹಿಸುವವರಿಗೆ ಮಾತ್ರ ಪಾವತಿಸಲಾಗುತ್ತದೆ

ಮತ್ತು ಇದು ಕಾಲಕಾಲಕ್ಕೆ ಚಾಲ್ತಿಯಲ್ಲಿರುವಂತೆ TDS ಮತ್ತು ಇತರ ಅನ್ವಯವಾಗುವ ತೆರಿಗೆಗಳಿಗೆ ಒಳಪಟ್ಟಿರುತ್ತದೆ.

75. ಸ್ಪರ್ಧೆಯಲ್ಲಿ ಸ್ಪರ್ಧಿ/ಗಳು ಗೆದ್ದ ಹಣವನ್ನು ಆಧರಿಸಿ, ಅವರಿಂದ ಕೇಳಲಾದ ದಾಖಲೆಗಳನ್ನು ಸ್ವೀಕರಿಸಿದ ನಂತರವಷ್ಟೆ ಕಂಪನಿಯು ಸ್ಪರ್ಧಿ/ಗಳಿಗೆ ಹಣ ಪಾವತಿ ಮಾಡುತ್ತದೆ. ಹೀಗೆ ಕೇಳಿದ ದಾಖಲೆಗಳನ್ನು 15 ದಿನಗಳ ಒಳಗಾಗಿ ಸಲ್ಲಿಸಲು ಸ್ಪರ್ಧಿ/ಗಳು ವಿಫಲವಾದರೆ ಅವನು/ಅವಳು ಕಂಪನಿಯಿಂದ ಪಡೆಯಬೇಕಾಗಿದ್ದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಕೋರಿಕೆ ಸಲ್ಲಿಸಿದ ದಾಖಲೆಗಳ ಸ್ವೀಕೃರಿಸಿದ 120 ದಿನಗಳಲ್ಲಿ ಕಂಪನಿಯು ಸ್ಪರ್ಧಿ/ಗಳಿಗೆ ಹಣ ಪಾವತಿ ಮಾಡುತ್ತದೆ.

76. ಸ್ಪರ್ಧಿ/ಗಳು ಗಳಿಸಿದ ಬಹುಮಾನದ ಹಣಕ್ಕೆ ಭಾರತದ ಕಾನೂನಿನಡಿಯಲ್ಲಿ ಅನ್ವಯವಾಗುವ ಎಲ್ಲಾ ತೆರಿಗೆಗಳು ಮತ್ತು/ಅಥವಾ ಸುಂಕಗಳನ್ನು ಬಹುಮಾನ ಗಳಿಸಿದ ಸ್ಪರ್ಧಿ/ಗಳು ಕಟ್ಟಬೇಕಾಗುತ್ತದೆ. ಅನ್ವಯವಾಗುವ ಎಲ್ಲಾ ತೆರಿಗೆಗಳು ಮತ್ತು ಸುಂಕಗಳನ್ನು ಕಡಿತಗೊಳಿಸಿದ ನಂತರ ಕಂಪನಿಯು ತಿಳಿಸಿದ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದ ನಂತರ ಮತ್ತು ಕಂಪನಿ ನಿಗದಿಪಡಿಸಿದ ಸಮಯದ ಒಳಗೆ ಸ್ಪರ್ಧಿ/ಗಳು / ವಿಜೇತರಿಗೆ ಬಹುಮಾನದ ಹಣವನ್ನು ಪಾವತಿಸಲಾಗುತ್ತದೆ. ಸ್ಪರ್ಧಿ/ಗಳು / ವಿಜೇತರು ಬಹುಮಾನದ ಹಣವನ್ನು ಪಡೆಯಲು ಪಾನ್ ಕಾರ್ಡಿನ ದೃಢೀಕರಿಸಿದ ನಕಲು ಕಡ್ಡಾಯವಾಗಿದೆ.

77. ಸ್ಪರ್ಧಿ/ಗಳು / ವಿಜೇತರು ವಂಚನೆ, ಅಪ್ರಾಮಾಣಿಕತೆ ಅಥವಾ ಈ ನಿಯಮಗಳು ಮತ್ತು ನಿಬಂಧನೆಗಳ ಪ್ರಕಾರ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಅರ್ಹತೆ ಇಲ್ಲದೇ ಇದ್ದ ಸಂದರ್ಭದಲ್ಲಿ ಅವರಿಗೆ ಹಣ ಪಾವತಿಸಿದ ನಿರಾಕರಿಸಬುಹು ಅಥವಾ ಪಾವತಿಸಿ ಎಲ್ಲಾ ಮೊತ್ತವನ್ನು ಹಿಂಪಡೆಯಬಹುದು.

**ಇತರ ನಿಯಮಗಳು**

78. ಸ್ಪರ್ಧೆಯಲ್ಲಿ ನೋಂದಣಿ ಮಾಡಿಕೊಳ್ಳಲು ಮತ್ತು ಭಾಗಗವಹಿಸುವಿಕೆಯ ಪ್ರಕ್ರಿಯೆಗಳು ಇಲ್ಲಿ ಹೇಳಲಾದ ನಿಯಮಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿವೆ. ಯಾವುದೇ ಸ್ಪರ್ಧಿ/ಗಳು ಸ್ಪರ್ಧೆಯ ನಿಯಮಗಳ ಅನುಸರಣೆ ಮಾಡದಿದ್ದ ಸಂದರ್ಭದಲ್ಲಿ ತಕ್ಷಣವೇ ಅವನು/ಅವಳನ್ನು ಭಾಗವಹಿಸುವಿಕೆಯಿಂದ ಅಥವಾ ಗೆಲುವಿನಿಂದ ಅನರ್ಹಗೊಳಿಸಲಾಗುತ್ತದೆ.

79. ಸ್ಪರ್ಧೆಯ ಯಾವುದೇ ಭಾಗ, ಮತ್ತು / ಅಥವಾ ದೂರವಾಣಿ ವ್ಯವಸ್ಥೆಯ ಕಾರ್ಯಾಚರಣೆ, ಆಡಿಷನ್ ಗಳು, ಕಾಲ್-ಬ್ಯಾಕ್‌ಗಳು, ಯಾವುದೇ ಹಂತದಲ್ಲಿ ಸ್ಪರ್ಧಿ/ಗಳ ಆಯ್ಕೆ, ಅಥವಾ ಯಾವುದೇ ಪ್ರಶ್ನೆ ಅಥವಾ ಉತ್ತರದ ಆಯ್ಕೆಗಳು ಸಿಂಧುತ್ವಕ್ಕೆ ಸಂಬಂಧಿಸಿದಂತೆ ಯಾವುದೇ ದೋಷ, ತಪ್ಪುಗ್ರಹಿಕೆ ಅಥವಾ

ವಿವಾದದ ಸಂದರ್ಭದಲ್ಲಿ ಕಂಪನಿಯ ನಿರ್ಧಾರವೇ ಅಂತಿಮ ಮತ್ತು ಅದಕ್ಕೆ ಎಲ್ಲಾ ಸ್ಪರ್ಧಿ/ಗಳು ಬದ್ಧರಾಗಿರಬೇಕು. ಸ್ಪರ್ಧೆಯ ಕಂಪನಿ / ನಿರ್ಮಾಪಕರು ಯಾವುದೇ ಸಂದರ್ಭದಲ್ಲಿ ಪ್ರಸ್ತುತ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಒಳಗೊಳ್ಳದೇ ಇರುವ ವಿಷಯಗಳ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿದ್ದಾರೆ.

80. ಸ್ಪರ್ಧೆಯನ್ನು ಮತ್ತು ಸಂಭವಿಸಬಹುದಾದ ಯಾವುದೇ ಸಮಸ್ಯೆಯನ್ನು ಸುಧಾರಿಸುವ ಸಲುವಾಗಿ ಕಂಪನಿ ತನ್ನ ವಿವೇಚನೆಯಿಂದ ಮತ್ತು ಪೂರ್ವಸೂಚನೆ ಇಲ್ಲದೆ ಸ್ಪರ್ಧೆ ಮತ್ತು / ಅಥವಾ ಪಾಲ್ಗೊಳ್ಳುವವರ ಆಯ್ಕೆಯ ಪ್ರಕ್ರಿಯೆಯನ್ನು ನಿಯಂತ್ರಿಸುವ ನಿಯಮ ಮತ್ತು ನಿಬಂಧನೆಗಳನ್ನು ತಿದ್ದುಪಡಿ ಮಾಡುವ (ಸೇರಿಸುವ, ಅಳಿಸುವ ಅಥವಾ ಮಾರ್ಪಡಿಸುವ) ಅಧಿಕಾರವನ್ನು ಹೊಂದಿರುತ್ತಾರೆ.

81. ಯಾವುದೇ ಪೂರ್ವಸೂಚನೆ ಅಥವಾ ನೋಟೀಸು ನೀಡದೆ ಯಾವುದೇ ಸಮಯದಲ್ಲಾದರೂ ಸ್ಪರ್ಧೆಯನ್ನು ಅಂತ್ಯಗೊಳಿಸಲು ಹಕ್ಕು ಕಂಪನಿಗೆ ಇದೆ ಮತ್ತು ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಯಾವುದೇ ರೀತಿಯಲ್ಲೂ ಪರಿಹಾರ ಒದಗಿಸುವ ಮತ್ತು/ಅಥವಾ ಕಾರ್ಯಕ್ರಮಕ್ಕಾಗಿ ಸ್ಪರ್ಧೆಯಲ್ಲಿ ಆಯ್ಕೆಯಾದ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಬೇರೆಡೆ ಅವಕಾಶ ನೀಡುವ ಬಾಧ್ಯತೆಯನ್ನು ಕಂಪನಿ ಹೊಂದಿಲ್ಲ.

82. ಸ್ಪರ್ಧೆಗೆ ನೋಂದಣಿಯಾಗುವುದರಿಂದ ಸ್ಪರ್ಧೆಯಲ್ಲಿ ಮುಂದುವರಿಯಲು ನೋಂದಾಯಿತರ ಆಯ್ಕೆಗೆ ಖಾತರಿ ನೀಡುವುದಿಲ್ಲ. ನೋಂದಣಿಯು ಸಹ ಯಾವುದೇ ಸ್ಪರ್ಧಿ/ಗಳಿಗೆ ಪ್ರಶಸ್ತಿ ಅಥವಾ ಬಹುಮಾನದ ಅರ್ಹತೆ ಅಲ್ಲ.

83. ಎಲ್ಲಾ ನೋಂದಣಿಗಳು (i) IVR ಮೂಲಕ (ii) SMS ಮೂಲಕ (iii) ಚಾನೆಲ್ ಮೂಲಕ (iv) ಮೈಜಿಯೋ ಮೂಲಕ ಮತ್ತು (v) ನಿಯಮಗಳು ಹಾಗೂ ನಿಬಂಧನೆಗಳ ಪ್ರಕಾರ ಸ್ವೀಕರಿಸಿದ ಸೂಚನೆಗಳಂತೆ ನೋಂದಣಿಯಾಗುವ ಷರತ್ತುಗಳನ್ನು ಪೂರ್ಣಗೊಳಿಸುವಿಕೆಗೆ (ಅಗತ್ಯವಿರುವ ಸ್ಥಳದಲ್ಲಿ) ಒಳಪಟ್ಟಿರುತ್ತವೆ.

84. ನೋಂದಣಿ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ಕಂಪನಿ ಅಥವಾ ಯಾವುದೇ ಮೂರನೇ ವ್ಯಕ್ತಿ ಕಳುಹಿಸುವ ಪ್ರಚಾರ ಸಂದೇಶಗಳನ್ನು ಸ್ವೀಕರಿಸಲು ನೋಂದಾಯಿತ/ರು ಸಮ್ಮತಿಸಿದ್ದಾರೆ ಎಂದು ಪರಿಗಣಿಸಲಾಗುತ್ತದೆ.

85. ಅನಿವಾರ್ಯ ಕಾರಣಗಳಿಂದ ಸ್ಪರ್ಧೆಯ ಕಾರ್ಯಾಚರಣೆ (ಸಂಬಂಧಿತ ಟೆಲಿಫೋನ್ ವ್ಯವಸ್ಥೆಗಳ ಕಾರ್ಯಾಚರಣೆಯು ಸೇರಿದಂತೆ, ಆದರೆ ಅಷ್ಟಕ್ಕೇ ಸೀಮಿತವಲ್ಲದಂತೆ, ಕಾಲ್ ಸೆಂಟರ್ ಕಾರ್ಯಾಚರಣೆಗಳು, ಮತ್ತು ಸಾಫ್ಟ್‌ವೇರ್ ಸಿಸ್ಟಮ್‌ಗಳು); ರೆಕಾರ್ಡಿಂಗ್; ಪ್ರದರ್ಶನದ ಯಾವುದೇ /

ಎಲ್ಲಾ ಭಾಗವವನ್ನು ಪ್ರಸಾರ ಮಾಡುವಿಕೆಗೆ ಅಡಚಣೆಯಾದಲ್ಲಿ, ಸ್ಪರ್ಧೆಯ / ಶೋನ ಎಲ್ಲಾ ಅಥವಾ ಯಾವುದೇ ಭಾಗವನ್ನು ಕಂಪನಿಯು ರದ್ದುಗೊಳಿಸಬಹುದು, ಅಥವಾ ಸೂಕ್ತವೆನಿಸುವ ಬೇರೆ ನಿರ್ಧಾರ ತೆಗೆದುಕೊಳ್ಳಬಹುದು.

86. ಸ್ಪರ್ಧೆಯಲ್ಲಿ ಸ್ಪರ್ಧಿಯ ಭಾಗವಹಿಸುವಿಕೆಯ ಹೊರತಾಗಿಯೂ ಸ್ಪರ್ಧಿ/ಗಳು ಕಂಪನಿಯು ದಾಖಲಿಸಿದ ಯಾವುದೇ ಭಾಗದಲ್ಲಿ ಭಾಗವಹಿಸಿದ್ದಲ್ಲಿ, ಅಥವಾ ಭಾಗವಾಗಿ ಅಥವಾ ಪೂರ್ಣವಾಗಿ ತನ್ನ ಕೊಡುಗೆಯನ್ನು ನೀಡಿರುವ ಶೋನ ಯಾವುದೇ ಭಾಗವನ್ನು ಕಂಪನಿಯು ಪ್ರಸಾರ ಮಾಡಲೇಬೇಕು ಎಂಬ ಯಾವುದೇ ಬಾಧ್ಯತೆ ಇಲ್ಲ.

87. ಕಂಪನಿಯು ತನ್ನ ವಿವೇಚನೆಯಂತೆ ನೋಂದಣಿ, ಕಾಲ್-ಬ್ಯಾಕ್‌ಗಳು, ಆಡಿಷನ್‌ಗಳು, ಸ್ಪರ್ಧೆಯ ಸ್ಟುಡಿಯೊ ಭಾಗವನ್ನು ರೆಕಾರ್ಡ್ ಮಾಡಿಕೊಳ್ಳುವ ಮತ್ತು ಪ್ರಸಾರವನ್ನು ಮಾಡುವ ದಿನಾಂಕ/ಗಳು ಬದಲಾಯಿಸುವ ಹಕ್ಕನ್ನು ಹೊಂದಿದೆ.

88. ಸ್ಪರ್ಧೆಯಲ್ಲಿ ವಿಜೇತ/ರು ಮತ್ತು / ಅಥವಾ ಭಾಗವಹಿಸಿದವರು ಯಾವುದೇ ಮತ್ತು ಎಲ್ಲ ನಿಯಮಗಳನ್ನು / ಪ್ರಕ್ರಿಯೆಗಳನ್ನು ಉಲ್ಲಂಘಿಸಿರುವುದು ಕಂಡುಬಂದರೆ, ಕಂಪನಿಯು ಅಂತಹ ವ್ಯಕ್ತಿ/ಗಳ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಹೊಂದಿದೆ, ಆದರೆ ಇದು ಅಷ್ಟಕ್ಕೆ ಸೀಮಿತವಾಗದೆ, ಸಂಬಂಧಪಟ್ಟ ವಿಜೇತ (ಹಾಟ್ ಸೀಟ್ ಅಥವಾ ಫಾಸ್ಟೆಸ್ಟ್ ಫಿಂಗರ್ ಫಸ್ಟ್ ಆಗಿದ್ದರೂ) ಕಂಪನಿಗೆ ಸರಿ ಎನಿಸುವಂತೆ ಸ್ಪರ್ಧೆಯಲ್ಲಿ ಗಳಿಸಿದ ಬಹುಮಾನದ ಹಣವನ್ನು ಪೆನಾಲ್ಟಿ ಬಡ್ಡಿಯೊಂದಿಗೆ ಮರುಪಾವತಿಸಬೇಕು.

89. ಭಾಗವಹಿಸಲು ನಿಯಮಗಳು ಮತ್ತು ನಿಬಂಧನೆಗಳ ಬಗ್ಗೆ ಸ್ಪರ್ಧಿ/ಗಳು ಸ್ಪಷ್ಟವಾಗಿ ತಿಳಿಯದ್ದರೆ ಅವನು/ಅವಳು KKP@colorskannada.com ಗೆ ಈಮೇಲ್ ಕಳುಹಿಸಬೇಕು. ಕಂಪನಿಯು ಅದಕ್ಕೆ ಪ್ರತಿಕ್ರಿಯೆ ನೀಡಲು ಸಮಂಜಸವಾದ ಪ್ರಯತ್ನಗಳನ್ನು ಮಾಡಲಿದೆ. ಆದರೂ ನಿರ್ದಿಷ್ಟಪಡಿಸಿದ ಸಮಯ / ಕಾಲಾವಧಿಯನ್ನು ವಿಸ್ತರಿಸಲು ಇದೊಂದು ಕಾರಣವಾಗಬಾರದು.

90. ಸ್ಪರ್ಧೆಯ ರಚನೆಯನ್ನು ಬದಲಿಸುವ ಹಕ್ಕನ್ನು ನಿರ್ಮಾಪಕರು ಕಾಯ್ದಿರಿಸಿಕೊಂಡಿದ್ದಾರೆ. ಅಂದರೆ ಸ್ಪರ್ಧೆಗೆ ಆಡಿಷನ್ / ಸುತ್ತುಗಳನ್ನು ಸೇರಿಸುವುದು / ಕಡಿಮೆ ಮಾಡುವುದು / ಬದಲಾಯಿಸುವಿಕೆ ಇತ್ಯಾದಿ.

91. ಸ್ಪರ್ಧೆಯಲ್ಲಿ ಭಾಗವಹಿಸುವ ಸ್ಪರ್ಧಿ/ಗಳು ಸ್ಪರ್ಧೆಗೆ ಲಭ್ಯವಿರಬೇಕು ಎಂಬುದು ಪ್ರವೇಶ ಮತ್ತು ಭಾಗವಹಿಸುವಿಕೆಯ ಒಂದು ಷರತ್ತು ಆಗಿದ್ದು, ಅವರು ಕಂಟೆಸ್ಟೆಂಟ್ ರಿಲೀಸ್ ಫಾರ್ಮ್ ಮತ್ತು ಕಂಪನಿ /

ನಿರ್ಮಾಪಕರು ಕೋರುವ ಯಾವುದೇ ಇತರ ದಾಖಲೆಗಳನ್ನು ಒಪ್ಪಿಕೊಳ್ಳಬೇಕು ಮತ್ತು ಸಹಿ ಮಾಡಬೇಕು ಮತ್ತು ಈ ಕಂಟೆಸ್ಟೆಂಟ್ ರಿಲೀಸ್ ಫಾರ್ಮ್ ಮತ್ತು ಕಾಲಕಾಲಕ್ಕೆ ಕಂಪನಿಯು ಜಾರಿಗೆ ತರುವ ಅದರೆ ಇಷ್ಟಕ್ಕೇ ಸೀಮಿತವಲ್ಲದ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧರಾಗಿರೇಕು.

92. ಕಂಪನಿಯ ನಿರ್ಧಾರವೇ (ಅಥವಾ ಸರಿಹೊಂದುವಲ್ಲಿ, ಜಡ್ಜ್‌ಗಳ ನಿರ್ಧಾರ) ಅಂತಿಮವಾಗಿದೆ ಮತ್ತು ಸ್ಪರ್ಧೆ/ ಶೋನ ಹಿತಾಸಕ್ತಿಗಳು ಯಾವುದೇ ಸ್ಪರ್ಧಿ/ಗಳು ಮತ್ತು / ಅಥವಾ ಸಹಯೋಗಿಗಳ ಹಿತಾಸಕ್ತಿಗಿಂತ ಮುಖ್ಯ ಎಂಬುದನ್ನು ಸ್ಪರ್ಧಿ/ಗಳು ಒಪ್ಪಿಕೊಳ್ಳುತ್ತಾರೆ.

93. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವಾಗ ಸ್ಪರ್ಧಿ/ಗಳು ಎಲ್ಲಾ ಸಮಯದಲ್ಲೂ ಸೂಕ್ತವಾಗಿ ವರ್ತಿಸಬೇಕು ಮತ್ತು ಈ ನಿಯಮಗಳು ಮತ್ತು ನಿಬಂಧನೆಗಳು ಮತ್ತು ಯಾವುದೇ ಇತರ ನಿಯಮಗಳು ಮತ್ತು ನಿಬಂಧನೆಗಳನ್ನು ಆಡಿಷನ್ ಮತ್ತು / ಅಥವಾ ಸ್ಟುಡಿಯೋದಲ್ಲಿ ಅನುಸರಿಸಬೇಕು. ಇಂತಹ ನಿಮಮಗಳನ್ನು ಮುರಿಯುವ ಮತ್ತು / ಅಥವಾ ಸರಿಯಾಗಿ ವರ್ತಿಸಲು ವಿಫಲರಾಗುವ ಸ್ಪರ್ಧಿಗಳನ್ನು ಸ್ಪರ್ಧೆ, ಆಡಿಷನ್, ಸ್ಟುಡಿಯೋದಿಂದ ತೆಗೆದುಹಾಕಲು ಮತ್ತು ಅಂತಹ ಸ್ಪರ್ಧಿ/ಗಳನ್ನು ಅನರ್ಹಗೊಳಿಸುವ ಹಕ್ಕು ಕಂಪನಿಯು ಸಂಪೂರ್ಣ ವಿವೇಚನೆಗೆ ಸೇರಿದ್ದು.

94. ಈ ನಿಯಮಗಳು ಮತ್ತು ನಿಬಂಧನೆಗಳನ್ನು ಸ್ಪರ್ಧಿ/ಗಳು ಸಹಿ ಮಾಡಿದ ಯಾವುದೇ ಮತ್ತು ಎಲ್ಲಾ ಬಿಡುಗಡೆ ನಮೂನೆಗಳೊಂದಿಗೆ ಓದಿಕೊಳ್ಳಬೇಕು ಮತ್ತು ಕಂಟೆಸ್ಟೆಂಟ್ ರಿಲೀಸ್ ಫಾರ್ಮ್ ಮತ್ತು ಈ ನಿಯಮಗಳು ಮತ್ತು ನಿಬಂಧನೆಗಳ ನಡುವಿನ ಯಾವುದೇ ಹೊಂದಾಣಿಕೆ ಇಲ್ಲದ ಸಂದರ್ಭದಲ್ಲಿ, ಈ ನಿಯಮಗಳು ಮತ್ತು ನಿಬಂಧನೆಗಳು ಅಂತಿಮವಾಗಿರುತ್ತವೆ.

95. ಯಾವುದೇ ಆವರಣದಲ್ಲಿ ಅಥವಾ ಸ್ಪರ್ಧೆಯ ಯಾವುದೇ ಭಾಗದಲ್ಲಿ ಯಾವುದೇ ಶಸ್ತ್ರಾಸ್ತ್ರಗಳು, ಮದ್ಯ ಅಥವಾ ಅಕ್ರಮ ವಸ್ತುಗಳಿಗೆ ಅನುಮತಿ ನೀಡಲಾಗುವುದಿಲ್ಲ. ಸ್ಪರ್ಧಿ/ಗಳು ಒಳ್ಳೆಯ ನೈತಿಕ ನಡತೆ ಹೊಂದಿರಬೇಕು ಮತ್ತು ಯಾವುದೇ ಔಷಧಿ, ಮಾಧಕ ವಸ್ತುಗಳು ಅಥವಾ ಇತರ ಸೈಕೋಟ್ರೊಪಿಕ್ ಪದಾರ್ಥದ ಪ್ರಭಾವ ಅಥವಾ ಅಭ್ಯಾಸದ ಅಡಿಯಲ್ಲಿ ಇರಬಾರದು, ಏಕೆಂದರೆ ಇದು ಸ್ಪರ್ಧೆಯಲ್ಲಿ ಭಾಗವಹಿಸುವವರ ಸಾಮರ್ಥ್ಯವನ್ನು ಕುಗ್ಗಿಸಬಹುದು. ಯಾವುದೇ ನಿಷೇಧಿತ ವಸ್ತುಗಳ ಬಳಕೆ ಅನರ್ಹತೆಗೆ ಕಾರಣವಾಗಬಹುದು.

96. ಈ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಯಾವುದೇ ನಿಯಮವು ಯಾವುದೇ ನ್ಯಾಯಾಲಯ ಅಥವಾ ಇತರ ಸಕ್ಷಮ ಅಧಿಕಾರದಿಂದ ಪೂರ್ಣವಾಗಿ ಅಥವಾ ಭಾಗಶಃ ನಿರರ್ಥಕ ಅಥವಾ

ಕಾರ್ಯಗತಗೊಳ್ಳದಿದ್ದರೆ, ಈ ನಿಯಮಗಳು ಮತ್ತು ನಿಬಂಧನೆಗಳ ಇತರ ನಿಬಂಧನೆಗಳು ಮಾನ್ಯವಾಗಿರುತ್ತವೆ.

97. ಈ ನಿಯಮಗಳು ಮತ್ತು ನಿಬಂಧನೆಗಳು ಮತ್ತು ಸ್ಪರ್ಧೆಯು ಭಾರತದ ಕಾನೂನುಗಳಿಗೆ ಅನುಗುಣವಾಗಿ ನಿಯಂತ್ರಿಸಲ್ಪಟ್ಟಿವೆ ಮತ್ತು ಸ್ಪರ್ಧಿ/ಗಳು ಬೆಂಗಳೂರಿನ ನ್ಯಾಯಾಲಯಗಳ ಕಾನೂನು ವ್ಯಾಪ್ತಿಗೆ ಒಳಗಾಗುತ್ತಾರೆ.

98. ಶೂಟ್ ಮತ್ತು ಆಡಿಷನ್‌ಗಳ ಸಮಯದಲ್ಲಿ ಮೊಬೈಲ್ ಫೋನುಗಳ ಬಳಕೆಗೆ ಅನುಮತಿ ಇರುವುದಿಲ್ಲ. ಇದು ಅನರ್ಹತೆಗೆ ಕಾರಣವಾಗಬಹುದು.

99. ನೋಂದಣಿಯು ಸ್ಪರ್ಧಿ/ಗಳ ಆಯ್ಕೆ ಅಥವಾ ಭಾಗವಹಿಸುವಿಕೆಯನ್ನು ಖಾತರಿಪಡಿಸುವುದಿಲ್ಲ ಮತ್ತು ಆಯ್ಕೆಯು ಕಂಪನಿ ಅಥವಾ ಅದರ ಅಂಗಸಂಸ್ಥೆಗಳ ಸಂಪೂರ್ಣ ವಿವೇಚನೆಯ ಪ್ರಕಾರ ಆಗಿರುತ್ತದೆ.

100. ಸ್ಪರ್ಧೆಯ ಕಂಪನಿ / ನಿರ್ಮಾಪಕರು ಪ್ರಸ್ತುತ ನಿಯಮಗಳು ಮತ್ತು ನಿಬಂಧನೆಗಳ ವ್ಯಾಪ್ತಿಗೆ ಒಳಪಡದ ಯಾವುದೇ ಪ್ರಕರಣದ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಅಧಿಕಾರವನ್ನು ಹೊಂದಿರುತ್ತಾರೆ.

**ಹೊಣೆಗಾರಿಕೆ**

101. ಸ್ಪರ್ಧೆ ಮತ್ತು / ಅಥವಾ ಬಹುಮಾನಕ್ಕೆ ಸಂಬಂಧಿಸಿದಂತೆ ಸ್ಪರ್ಧಿ/ಗಳು ಮತ್ತು / ಅಥವಾ ವಿಜೇತರಿಗೆ ಯಾವುದೇ ರೀತಿಯಲ್ಲಿ ಉಂಟಾಗುವ ಯಾವುದೇ ದೈಹಿಕ ಗಾಯ, ಮರಣ, ಮಾನಸಿಕ ಆಘಾತಕ್ಕೆ ಸಂಬಂಧಿಸಿದಂತೆ ಕಂಪನಿ ಮತ್ತು / ಅಥವಾ ಚಾನೆಲ್ ಯಾವುದೇ ರೀತಿಯ ಹೊಣೆ ಮತ್ತು / ಅಥವಾ ಜವಾಬ್ದಾರಿಯನ್ನು ಹೊಂದಿರುವುದಿಲ್ಲ.

102. ಸ್ಪರ್ಧೆಗೆ ಕಂಪನಿಯು ಉಪಯೋಗಿಸಿಕೊಂಡಿರುವ ಕಂಪನಿ, ನಿರ್ಮಾಪಕರು, ನ್ಯಾಯಾಧೀಶರು, ಹೋಸ್ಟ್, ಜಾಹೀರಾತು ಏಜೆನ್ಸಿಗಳು, ಉಪ-ಗುತ್ತಿಗೆದಾರರು ಮತ್ತು ನಿರ್ಮಾಣ (ಫಾರ್ಮ್ಯಾಟ್ ಮಾಲೀಕರು ಮತ್ತು ಕಾರ್ಯಕ್ರಮದ ಪ್ರಸಾರಕರು ಸೇರಿದಂತೆ), ಆಡಳಿತ ಅಥವಾ ಆಡಿಷನ್, ಸ್ಪರ್ಧೆ ಅಥವಾ ಕಾರ್ಯಕ್ರಮದ ತೀರ್ಪುಗಾರರ ("ಸಂಬಂಧಿತ ಪಕ್ಷಗಾರರು") ಜೊತೆ ಸಂಪರ್ಕ ಹೊಂದಿದ ಯಾವುದೇ ವ್ಯಕ್ತಿ ಅಥವಾ ಘಟಕವು ಸ್ಪರ್ಧಿ/ಗಳು ಅಥವಾ ಸಹಯೋಗಿಗಳು ಸ್ಪರ್ಧೆಯಿಂದಾಗಿ ಅನುಭವಿಸುವ ಯಾವುದೇ ನಷ್ಟ, ಹಾನಿ ಮತ್ತು ಸ್ಪರ್ಧಿ(ಗಳು) ಅಥವಾ ಸಹಯೋಗಿಗಳಿಗೆ ಸ್ಪರ್ಧೆಯ ಯಾವುದೇ ಹಂತದಲ್ಲಿ ಸಂಭವಿಸುವ ಯಾವುದೇ ನಷ್ಟ, ಹಾನಿ, ಖರ್ಚು ವೆಚ್ಚ ಅಥವಾ ಜೀವ ಅಥವಾ

ಸ್ವತ್ತಿಗೆ ಆದ ಹಾನಿಗಳು ಮತ್ತು ಸ್ಪರ್ಧೆಯ ನಿರ್ಮಾಣದ ಸಮಯದಲ್ಲಿ ಮುಂದಿನ ಕಾರಣಗಳಿಂದ ಉಂಟಾಗುವ ಅಥವಾ ಸಂಭವಿಸುವ ಹಾನಿಗಳಿಗೆ ಯಾವುದೇ ಹೋಣೆಗಾರಿಕೆ ವಹಿಸುವುದಿಲ್ಲ 1) ಸಾರಿಗೆ ಅಥವಾ ಇತರ ಯಾವುದೇ ವೈಫಲ್ಯದಿಂದ ಆಡಿಷನ್‌ಗೆ / ತೀರ್ಪುಗಾರರ ಮುಂದೆ ಹಾಜರಾಗಲು ಆಗದಿರುವುದು ಸೇರಿದಂತೆ ಸ್ಪರ್ಧೆಯ ಆಡಳಿತ (ವೇಳಾಪಟ್ಟಿಯೂ ಸೇರಿದಂತೆ); (2) ಆಡಿಷನ್ ನಲ್ಲಿ ಸ್ಪರ್ಧಿಯ ಅಥವಾ ಯಾವುದೇ ಮೂರನೇ ವ್ಯಕ್ತಿಯ ಭಾಗವಹಿಸುವಿಕೆ, ಅಥವಾ ಆಯ್ಕೆಯಾಗಿರುವಿ ಅಥವಾ ಅನರ್ಹಗೊಳಿಸಿರುವಿಕೆ; (3) ತೀರ್ಪುಗಾರರ ಅಥವಾ ಕಂಪನಿಯ ತೀರ್ಮಾನಗಳ ಪರಿಣಾಮವಾಗಿ; (4) ಹೋಸ್ಟ್ ಮತ್ತು / ಅಥವಾ ಕಂಪನಿಯು ಯಾವುದೇ ಕಾಮೆಂಟ್, ಟೀಕೆ, ತೀರ್ಪು, ಅಭಿಪ್ರಾಯ, ವಿಮರ್ಶೆ, ಮತ್ತು / ಅಥವಾ ಅವಲೋಕನದ ಪರಿಣಾಮವಾಗಿ ಮತ್ತು / ಅಥವಾ (5) ಸ್ಪರ್ಧೆಗೆ ಸಂಬಂಧಿಸಿದ ಯಾವುದೇ ಸಾಮಗ್ರಿಗಳಲ್ಲಿ ಯಾವುದೇ ಮುದ್ರಣ ಅಥವಾ ತಾಂತ್ರಿಕ ದೋಷಗಳು. ಮೇಲೆ ತಿಳಿಸಿರುವ ಸಾಮಾನ್ಯ ಸಂಗತಿಗಳಿಗೆ ಹೊರತಾಗಿ ಸಂಬಂಧಪಟ್ಟ ಪಕ್ಷಗಳು ಎಲ್ಲಾ ಬಗೆಯ ಪ್ರತ್ಯಕ್ಷ ಮತ್ತು ಪರೋಕ್ಷವಾದ ಹೊಣೆಗಾರಿಕೆಗಳು, ನಷ್ಟಗಳು - ಆಸ್ತಿ ಹಾನಿ ಮತ್ತು ನಷ್ಟಗಳನ್ನು ಒಳಗೊಂಡಂತೆ ಅಥವಾ ವ್ಯವಹಾರಗಳಲ್ಲಿನ ಲಾಭ ನಷ್ಟಗಳು, ಆದಾಯ ನಷ್ಟ, ಗುಡ್‌ವಿಲ್, ಪೈಪೋಟಿಯಿಂದಾಗಿ ಉಂಟಾಗಬಹುದಾದ ಸಂಭಾವ್ಯ ಲಾಭ ಇವುಹಳನ್ನು ಸ್ಪಷ್ಟವಾಗಿ ಹೊರಗಿರಿಸಿರತ್ತವೆ. ಯಾವುದೇ ಸಂದರ್ಭಗಳಲ್ಲೂ ನಷ್ಟಗಳು ಪರೋಕ್ಷವಾದ, ಪರಿಣಾಮದ ಕಾರಣಗಳಿಂದ ಉಂಟಾಗುವ ನಷ್ಟಗಳು ಅಥವಾ ಯಾವುದೇ ಮೂರನೆಯ ಪಕ್ಷವು ಅನುಭವಿಸುವ ನಷ್ಟಗಳನ್ನು ಒಳಗೊಂಡಿರುವುದಿಲ್ಲ ಅಥವಾ ಸಂಬಂಧಪಟ್ಟ ಪಕ್ಷಗಳಿಗೆ ಅನ್ವಯಿಸುವುದಿಲ್ಲ. ಅಥವಾ ಸ್ಪರ್ಧಿಗಳಿಂದ ಉಂಟಾಗುವ ನಷ್ಟಗಳು ಅಥವಾ ಸಂಬಂಧಪಟ್ಟ ಪಕ್ಷಗಳ ಮತ್ತು ನಿರ್ಮಾಪಕರ ನಿಯಂತ್ರಣ ಮೀರಿ ಉಂಟಾಗುವ ನಷ್ಟಗಳಿಗೆ ಅವರು ಹೊಣೆಯಾಗಿರುವುದಿಲ್ಲ.

103. ಸ್ಪರ್ಧೆಯ ವಿಜೇತ/ರು ಮತ್ತು / ಅಥವಾ ಸ್ಪರ್ಧಿ/ಗಳು ಚಾನೆಲ್, ಕಂಪನಿ, ಅದರ ನೌಕರರು, ಅಧಿಕಾರಿಗಳು, ಉಪ-ಗುತ್ತಿಗೆದಾರರು ಅಥವಾ ಗೆದ್ದ ಬಹುಮಾನದೊಂದಿಗೆ ಸಂಪರ್ಕ ಹೊಂದಿರುವ ಯಾವುದೇ ಇತರ ವ್ಯಕ್ತಿಯನ್ನು ಸ್ಪರ್ಧೆ / ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಸ್ಪರ್ಧೆಯ ಕಾರ್ಯವಿಧಾನಗಳು ಸೇರಿದಂತೆ ಆದರೆ ಅಷ್ಟಕ್ಕೇ ಸೀಮಿತವಾಗದೆ, ನಿರುಪದ್ರವಿಗಳು ಎಂದು ಪರಿಗಣಿಸಲು ಒಪ್ಪುತ್ತಾರೆ. ಮತ್ತು ವೈಯಕ್ತಿಕವಾಗಿ, ಕುಟುಂಬ ಯಾವುದೇ ಸದಸ್ಯರ ಮೂಲಕ ಮತ್ತು/ಅಥವಾ ಮೂರನೇ ವ್ಯಕ್ತಿಗಳ ಮೂಲಕ ಭಾರತದ ಯಾವುದೇ ನ್ಯಾಯಾಲಯಗಳಲ್ಲಿ ಅಥವಾ ಫೋರಂಗಳಲ್ಲಿ ಪ್ರಾಯೋಜಕರು ಮತ್ತು/ಅಥವಾ ಚಾನೆಲ್ / ಕಂಪನಿ / ನಿರ್ಮಾಪಕರ ವಿರುದ್ಧ ಅಪರಾಧ ಯಾವುದೇ ಹಾನಿ ಅಥವಾ ಪರಿಹಾರಗಳನ್ನು ಪಡೆಯಲು ದೂರು ಸಲ್ಲಿಸುವಂತಿಲ್ಲ.

104. ಎಪಿಸೋಡ್ / ಶೋನ ಚಿತ್ರೀಕರಣದ ಮೊದಲು / ನಂತರ / ಆಡಿಷನ್ / ಸ್ಪರ್ಧೆಯ ಸಮಯದಲ್ಲಿ / ಸ್ಟುಡಿಯೋದ ಸೆಟ್‌ನಲ್ಲಿ ಸ್ಪರ್ಧಿಗಳ ಯಾವುದೇ ವಸ್ತುಗಳ ನಷ್ಟಕ್ಕೆ / ಕಳ್ಳತನಕ್ಕೆ ಕಂಪನಿ / ನಿರ್ಮಾಪಕರು ಜವಾಬ್ದಾರರಾಗಿರುವುದಿಲ್ಲ.

105. ಸ್ಪರ್ಧಿಯು ಸ್ಪರ್ಧೆಗೆ ಆಯ್ಕೆಯಾಗಿ ಆಡಿಷನ್ ಅಥವಾ ಶೋನಲ್ಲಿ ಅವನ / ಅವಳ ಭಾಗವಹಿಸುವಿಕೆಯ ಪರಿಣಾಮವಾಗಿ ಉಂಟಾಗುವ ಯಾವುದೇ ಆದಾಯ, ಉದ್ಯೋಗ ಅಥವಾ ಇನ್ನಿತರ ನಷ್ಟಗಳಿಗೆ ಕಂಪನಿ / ನಿರ್ಮಾಪಕರು ಅಥವಾ ಅದರ ಅಂಗಸಂಸ್ಥೆ ಹೊಣೆಗಾರರಾಗಿರುವುದಿಲ್ಲ.

106. ಕಂಪನಿ / ನಿರ್ಮಾಪಕರು ಮತ್ತು ಅದರ ಉಪ-ಗುತ್ತಿಗೆದಾರ ನಿಯಂತ್ರಣಕ್ಕೆ ಮೀರಿದ ಯಾವುದೇ ಅಂಶಗಳ ಕಾರಣದಿಂದಾಗಿ ಆಡಿಷನ್ ಅಥವಾ ಸ್ಪರ್ಧೆಗೆ ಯಾವುದೇ ಅಡೆತಡೆಗಳು / ನಿಲುಗಡೆಗಳು / ಅಡಚಣೆಗಳು ಉಂಟಾದಲ್ಲಿ ಅಥವಾ ರದ್ದಾದಲ್ಲಿ ಕಂಪನಿ / ನಿರ್ಮಾಪಕರು ಮತ್ತು ಅದರ ಉಪ-ಗುತ್ತಿಗೆದಾರರು ಜವಾಬ್ದಾರರಾಗಿರುವುದಿಲ್ಲ / ಹೊಣೆಗಾರರಾಗಿರುವುದಿಲ್ಲ.

107.ಸ್ಪರ್ಧಿ/ಗಳು ಮತ್ತು ಸಹಯೋಗಿ/ಗಳು ಆಡಿಶನ್ ಸ್ಥಳಕ್ಕೆ ಬರುತ್ತಿರುವಾಗ ಅಥವಾ ಸ್ಟುಡಿಯೋ ಪಾರ್ಟ್ / ಕಾರ್ಯಕ್ರಮ / ಶೂಟ್ ಗೆ ಹಾಜರಾಗುತ್ತಿದ್ದಾಗ ಅಥವಾ ಸ್ಪರ್ಧೆಯಲ್ಲಿ ಭಾಗವಹಿಸುವಾಗ ಅವರಿಗೆ ಆಗುವ ಯಾವುದೇ ನಷ್ಟ, ಗಾಯ ಅಥವಾ ಇತರ ಯಾವುದೇ ತೊಂದರೆಗಳಿಗೆ ಕಂಪನಿ / ನಿರ್ಮಾಪಕರು ಮತ್ತು ಅದರ ಉಪ-ಗುತ್ತಿಗೆದಾರರು ಜವಾಬ್ದಾರರಾಗಿರುವುದಿಲ್ಲ, ಹೀಗಾಗಿ ಕಂಪನಿ ಪರವಾಗಿ ಸ್ಪರ್ಧಿ/ಗಳು ಮತ್ತು ಸಹಯೋಗಿ/ಗಳು ಇಂಡೆಮ್ನಿಟಿಗೆ ಸಹಿ ಹಾಕಬೇಕಾಗುತ್ತದೆ. ಸ್ಪರ್ಧಿ/ಗಳ ಸ್ಪರ್ಧೆಯ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಗಹಿಸುವಿಕೆಯಿಂದ ಉಂಟಾಗುವ ಯಾವುದೇ ಮತ್ತು ಎಲ್ಲಾ ಹಕ್ಕುಗಳು, ಕ್ರಮಗಳು, ಹಾನಿ, ಹೊಣೆಗಾರಿಕೆಗಳು, ನಷ್ಟಗಳು, ವೆಚ್ಚಗಳಿಗೆ ಸ್ಪರ್ಧೆಗೆ ಸಂಬಂಧಿಸಿರುವ ಏಜೆನ್ಸಿಗಳು ಅಥವಾ ವ್ಯಕ್ತಿಗಳು, ಕಂಪನಿ ಅಥವಾ ಅದರ ಸಹವರ್ತಿ ಏಜೆಂಟರು ಮತ್ತು ಅವರ ಪ್ರತಿಯೊಬ್ಬ ಅಧಿಕಾರಿಗಳು, ನಿರ್ದೇಶಕರು, ಪ್ರತಿನಿಧಿಗಳು ಮತ್ತು ನೌಕರರು, ಮತ್ತು/ಅಥವಾ ಯಾವುದೇ ಇತರರ ವಿರುದ್ಧ ಮೊಕದ್ದಮೆ ಹೂಡದಿರಲು ಸ್ಪರ್ಧಿ/ಗಳು ಮತ್ತು ಸಹಯೋಗಿಗಳು ಒಪ್ಪುತ್ತಾರೆ ಮತ್ತು ಒಡಂಬಡಿಕೆ ಮಾಡಿಕೊಳ್ಳುತ್ತಾರೆ.

108. ಆಡಿಷನ್ / ಸ್ಪರ್ಧೆಯಲ್ಲಿ ಭಾಗವಹಿಸುವಾಗ ಕಂಪನಿ ಅಥವಾ ಅದರ ಅಂಗಸಂಸ್ಥೆಗಳ ಕ್ರಮಗಳು ಅಥವಾ ಲೋಪಗಳಿಂದ ಉಂಟಾಗಬಹುದಾದ ಯಾವುದೇ ಕ್ಲೈಮುಗಳ ವಿರುದ್ಧ ಕಂಪನಿ ಅಥವಾ ಅದರ ಅಂಗಸಂಸ್ಥೆಗಳಿಗೆ ರಕ್ಷಣೆ ಒದಗಿಸಲು ಒಪ್ಪಿಕೊಳ್ಳುತ್ತಾರೆ.

109. ಟೆಲಿವಿಷನ್ ಸ್ಪರ್ಧೆಯಾದ "ಕನ್ನಡದ ಕೋಟ್ಯಾಧಿಪತಿ - 2019"ರಲ್ಲಿ ಭಾಗವಾಹಿಸಲು ಅರ್ಹತೆ ಪಡೆದಿರುವುದನ್ನು ಹೊರತುಪಿಸಿ ಸ್ಪರ್ಧಿ ಅಥವಾ ಅವರ ಕಾನೂನುಬದ್ಧ ಉತ್ತರಾಧಿಕಾರಿಗಳು ಕಂಪನಿ ಅಥವಾ ನಿರ್ಮಾಪಕರ ವಿರುದ್ಧ ಯಾವುದೇ ಇತರ ಹಕ್ಕುಗಳು ಅಥವಾ ಕ್ಲೈಮುಗಳನ್ನು ಹೊಂದಿರುವುದಿಲ್ಲ. ಸ್ಪಷ್ಟತೆಗಾಗಿ ಆಡಿಷನ್ ಅಥವಾ ಸ್ಪರ್ಧೆಗಾಗಿ ಭಾಗವಹಿಸುವ ಯಾವುದೇ ಸ್ಪರ್ಧಿ/ಗಳು ಯಾವುದೇ ಮೊತ್ತವನ್ನು ನೀಡಲಾಗುವುದಿಲ್ಲ ಎಂದು ಹೇಳಲಾಗುತ್ತಿದೆ.

110. "ಕನ್ನಡದ ಕೋಟ್ಯಾಧಿಪತಿ - 2019" ಸ್ಪರ್ಧೆಯನ್ನು ಪ್ರವೇಶಿಸುವ ಏಕೈಕ ಮಾರ್ಗವೆಂದರೆ ನಿಯಮಗಳು ಮತ್ತು ನಿಬಂಧನೆಗಳಲ್ಲಿ ವಿವರಿಸಿದಂತೆ ಭಾಗವಹಿಸುವುದು. ಸ್ಪರ್ಧೆಗೆ ಪ್ರವೇಶ ಪಡೆಯಲು ಬೇರೆ ಯಾವುದೇ ಅನ್ಯ ಮಾರ್ಗವಿಲ್ಲ. ಈ ಸಂಪೂರ್ಣ ಪ್ರಕ್ರಿಯೆಯು ಪಾರದರ್ಶಕವಾಗಿರುತ್ತದೆ ಮತ್ತು ಸ್ವತಂತ್ರ ಮೌಲ್ಯಮಾಪಕರಿಂದ ನಿಯಂತ್ರಿಸಲ್ಪುಡುತ್ತದೆ. ನಿಮ್ಮನ್ನು ಗೆಲ್ಲಿಸಲು ಸಹಾಯ ಮಾಡುತ್ತೇನೆಂದು ಬರುವ ಯಾವುದೇ ವ್ಯಕ್ತಿಯನ್ನು ನೀವು ಪರಿಗಣಿಸಿದರೆ ನಿಮಗೆ ಅವನು/ಅವಳು ವಂಚನೆ ಮಾಡುತ್ತಿದ್ದಾನೆ/ಳೆ ಎಂದರ್ಥ. ದಯವಿಟ್ಟು ನಿಮ್ಮ ಸ್ಥಳೀಯ ಪೋಲೀಸರನ್ನು ಸಂಪರ್ಕಿಸಿ ಈ ವ್ಯಕ್ತಿಯ ಬಗ್ಗೆ ತಕ್ಷಣವೇ ವರದಿ ಮಾಡಿ.

## ಅನುಬಂಧ 1 - SMS ಮತ್ತು IVR ಗಾಗಿ ಆಪರೇಟರ್ ಗಳು ಮತ್ತು ವೃತ್ತಗಳ ಪಟ್ಟಿ

### IVR ಗಾಗಿ ಈ ಪಟ್ಟಿಯನ್ನು ನೋಡಿ

| ಕ್ರ. ಸಂ. | ಆಪರೇಟರ್‌ಗಳ ಪಟ್ಟಿ |
|---|---|
| 1. | ವೋಡಾಫೋನ್ ಇಂಡಿಯಾ |
| 2. | ಏರ್‌ಟೆಲ್ ಇಂಡಿಯಾ |
| 3. | ಐಡಿಯಾ ಇಂಡಿಯಾ |
| 4. | BSNL ಇಂಡಿಯಾ |

| ಕ್ರ. ಸಂ. | ವೋಡಾಫೋನ್ ಇಂಡಿಯಾ | ಏರ್‌ಟೆಲ್ ಇಂಡಿಯಾ | ಐಡಿಯಾ ಇಂಡಿಯಾ | BSNL ಇಂಡಿಯಾ |
|---|---|---|---|---|
| 1. | ಆಂಧ್ರ ಪ್ರದೇಶ | ಆಂಧ್ರ ಪ್ರದೇಶ | ಆಂಧ್ರ ಪ್ರದೇಶ | ಆಂಧ್ರ ಪ್ರದೇಶ |
| 2. | ಚೆನ್ನೈ | ಚೆನ್ನೈ | ಕರ್ನಾಟಕ | ಕರ್ನಾಟಕ |
| 3. | ಕರ್ನಾಟಕ | ಕರ್ನಾಟಕ | ಕೇರಳ | ಕೇರಳ |
| 4. | ಕೇರಳ | ಕೇರಳ | ಮುಂಬೈ | ಮಹಾರಾಷ್ಟ್ರ |
| 5. | ಮುಂಬೈ | ಮುಂಬೈ | ತಮಿಳುನಾಡು | ತಮಿಳುನಾಡು |
| 6. | ತಮಿಳುನಾಡು | ತಮಿಳುನಾಡು | | |

### ಎಸ್.ಎಮ್.ಎಸ್.ಗಾಗಿ ಕೆಳಗಿನ ಪಟ್ಟಿ ನೋಡಿ

| ಆಪರೇಟರ್ ಗಳ ಪಟ್ಟಿ |
|---|
| ಏರ್ ಟೆಲ್ |
| ವೊಡಾಫೋನ |
| ಐಡಿಯಾ |
| ತಿಳಿದಿಲ್ಲ |

| ವೃತ್ತಗಳ ಪಟ್ಟಿ |
|---|
| ಆಂಧ್ರ ಪ್ರದೇಶ |
| ಅಸ್ಸಾಂ |
| ಬಿಹಾರ |
| ಚೆನ್ನೈ |
| ದೆಹಲಿ |
| ಗುಜರಾತ್ |
| ಹರಿಯಾಣ |
| ಹಿಮಾಚಲ ಪ್ರದೇಶ |
| ಜಮ್ಮು ಮತ್ತು ಕಾಶ್ಮೀರ |
| ಕರ್ನಾಟಕ |
| ಕೇರಳ |
| ಕೊಲ್ಕತ್ತಾ<br>ಮಧ್ಯ ಪ್ರದೇಶ |

| | |
|---|---|
| | ಮಹಾರಾಷ್ಟ್ರ<br>ಮುಂಬೈ<br>ಈಶಾನ್ಯ ಭಾರತ<br>ಒರಿಸ್ಸಾ<br>ಪಂಜಾಬ್<br>ರಾಜಸ್ಥಾನ<br>ತಮಿಳುನಾಡು<br>ತಿಳಿದಿಲ್ಲ<br>ಉತ್ತರ ಪ್ರದೇಶ ಪೂರ್ವ<br>ಪಶ್ಚಿಮ ಬಂಗಾಳ |